ಯಕ್ಷಗಾನ ರಾಜಸೂಯಾಧ್ವರ

(ತೆಂಕುಮಟ್ಟು)

★

ಉಡುಪಿ

ಪಾವಂಜೆ ಗುರುರಾವ್ ಅಂಡ್ ಸನ್ಸ್

ಯಕ್ಷಗಾನ ರಾಜಸೂಯಾಧ್ವರ

(ತೆಂಕುಮಟ್ಟು)

ಉಡುಪಿ

ಪಾವಂಜೆ ಗುರುರಾವ್ ಅಂಡ್ ಸನ್ಸ್

Yakṣagāna Rājasūyādhwara

ಮೂರನೆಯ ಅಚ್ಚು:

ಶಾ. ಶಕ ೧೮೯೫

ಪ್ರಕಾಶಕರು:

ಪಾವಂಜೆ ಗುರುರಾವ್ ಅಂಡ್ ಸನ್ಸ್

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

ಅಚ್ಚುಗಾರರು:

ಪಾವಂಜೆ ಗುರುರಾವ್ ಅಂಡ್ ಸನ್ಸ್

ಶ್ರೀಕೃಷ್ಣಮುದ್ರಣಾಲಯ

ಉಡುಪಿ

ರೂ. 1·75

ಶ್ರೀಃ



॥ ಶ್ರೀಗೋಪಾಲಕೃಷ್ಣಾಯ ನಮಃ ॥

ಶ್ರೀಮನ್ಮಹಾಭಾರತದೊಳಗಣ

ಯಕ್ಷಗಾನ ರಾಜಸೂಯಾಧ್ವರ

ಶಾರ್ದೂಲವಿಕ್ರೀಡಿತಂ

ಶ್ರೀಲಕ್ಷ್ಮೀಮನಲೋಲಪೂರ್ಣನಿಲಯಂ ಶರಣೌಘಪರಿಪಾಲನಂ
ಫಾಲಾಕ್ಷಾದಿಸಮಸ್ತದೇವರಭಯಂ ಭೂಕನ್ನಿಕಾನಿರ್ಭಯಮ್ ।
ಬಾಲಾರ್ಕಾಮಿತಕೋಟಿಭಾಸುರವಪುಂ ಭೂತಾಧಿನಾಥಪ್ರಿಯಂ
ಲೀಲಾಮೂರುತಿಭೀಕರಾನನಕೃಪಾ ಶ್ರೀನಾರಸಿಂಹಂ ಭಜೇ ॥

ರಾಗ ನಾಟಿ ಝಂಪೆತಾಳ

ಜಯ ಮಹಾಗಜವದನ । ಜಯ ಭಕ್ತಹೃತ್ಸದನ । ಜಯತಂ ರೂಪಿನ ಮದನ । ಜಯ ಕಠಿನಕದನ ॥ ಜಯ ॥ ಪ ॥ ವಿಧಿಭವಾಮರ ನಮಿತ । ವಿಮಲ ಪುಣ್ಯಸುಚರಿತ । ಕದನಕರ್ಕಶ ಧೀರ । ಕವಿಜನೋದ್ಧಾರ ॥ ಪದುಮನಾಭನ ಮಿತ್ರ । ಪಾವನಸುಚಾರಿತ್ರ । ಮದವೂರಗಣನಾಥ । ಮೂಷಿಕ ವರೂಥ ॥ ಜಯ ॥ ೧ ॥ ರುಂಡಮಾಲನ ಸುತ ಪ್ರ । ಚಂಡ ಮೂಲೋರ್ಣಕಕ್ಕೆ। ಗಂಡ ಮಹ ಪಾತಕದ । ತಂಡ ಸಂಹಾರ ॥ ಹಿಂಡುಮುನಿಪೋಷ ಭೂ । ಮಂಡಲದಿ ಪ್ರಖ್ಯಾತ । ಕುಂಡಲೀಧರ ಮೆರೆವ । ಶುಂಡಿಲಾಕಾರ ॥ ಜಯ ॥

ರಾಗ ಮಧುಮಾಧವಿ ಏಕತಾಳ

ತ್ರಾಹಿ ಶಂಕರಿ ಗೌರಿ ಶರಣಸಂಸಾರಿ । ಮೋಹಪಾಶವಿಚಾರಿ ಸಕಲಾವತಾರಿ ॥ ಸಾಹಸೋತ್ತಮೆ ಘೋರದನುಜಸಂಹಾರಿ । ಪಾಹಿ ಪಾಲಿಸು ಎನ್ನ ಭೂರಿ ಶೃಂಗಾರಿ ॥ ೧ ॥ ವಾರಿಜೋದ್ಭವರಾಣಿ ವರದೆ ಕಲ್ಯಾಣಿ । ಪೌರಾಣಾಗಮ ಪ್ರೀತೆ ಸಲಹೆನ್ನ ಮಾತೆ ॥ ಶಾರದೆ ನೀಯೆನ್ನ ಬಾಯೊಳು ನೆಲಸಿ । ತೋರಿಸಿಪ್ಪಾರ್ಥವ ಕರುಣಿಯೆಂದೆನಿಸಿ ॥ ೨ ॥

ವಾರ್ಧಿಕ

ಶ್ರೀಸರಸ್ವತಿಪಾರ್ವತೀಶರಂ ಧ್ಯಾನಿಸುತ । ವಾಸುದೇವನ ನುತಿಸಿ ಭೂಸುಮ ನಸರ ನೆನೆದು । ವ್ಯಾಸ ಮುಖ್ಯರ ಸ್ಮರಿಸಿ ಶೇಷಗರುಡಾದಿ ಹರಿದಾಸಜನಕಭಿ ನಮಿಸುತ ॥ ಆ ಸಪ್ತಶರಧಿಯಾಕಾಶಗಳಿಗೊಂದಿಸುತ । ಲಾ ಸಮೀರಜಗೆರಗಿ ತೋಷದೊಳು ಮನೆಯು ನರ । ಕೇಸರಿಯ ರೂಪ ಲಕ್ಷ್ಮೀಶ ನರಸಿಂಹಗೆ ವಿಶೇಷ ಭಕ್ತಿಯೊಳೆರಗುತ ॥ ೧ ॥

ಭಾಮಿನಿ

ಅಷ್ಟದಿಕ್ಪಾಲಕರಿಗೊಂದಿಸಿ । ತಿಷ್ಟದೇವತೆಗೆರಗಿ ಶ್ರೀಪರ । ಮೇಷ್ಠಿಯನು ಪೂಜಿಸುತಲತಿಶಯಂದರ್ತಿಯಿಂದೊಲಿದು ॥ ಸೃಷ್ಟಿಗಡಗೆಡೆದಾದಿಮೂರುತಿ । ವಿಷ್ಣುವಿನ ನಿಜಪಟ್ಟದರಸಿಯೊ । ಳಿಷ್ಟವೆಲ್ಲವ ಬೇಡಿ ಪೇಳುವೆನೀ ಕಥಾಮೃತವ ॥

ದ್ವಿಪದಿ

ಚಂದ್ರಸೂರ್ಯಾದಿಗಳಿಗೆರಗಿ ಕವಿಜನರ । ವಂದಿಸುತ ಕೈಮುಗಿವೆನಖಿಳ ಗುರುವರರ ॥ ೧ ॥ ಭಾರತಾಮೃತಶರಧಿಯೊಳಗೆ ಮೆರೆದಿರುವ । ಶ್ರೀರಮಣ ನಾಪ್ತರಹ ಪಾಂಡವರು ಮೆರೆವ ॥ ೨ ॥ ರಾಜಸೂಯಾಧ್ವರವ ಕೈಗೊಂಬ ಬಗೆಗೆ । ಆ ಜರಾಸಂಧಾದಿಗಳ ಜಯಿಸಿ ಕಡೆಗೆ ॥ ೩ ॥ ಯಾಗವನು ಪೂರಯಿಸಿ ಮೆರೆದ ಸಂಗತಿಯು । ರಾಗರಸದಿಂ ಪೇಳ್ವೆನಖಿಳ ಸತ್ಕಥೆಯು ॥ ೪ ॥ ಕೇಳಿ ಕವಿ ಜನರು ತಪ್ಪಿರಲು ತಿದ್ದುವುದು । ಶೀಲಗುಣವುಳ್ಳರಾದರಿಸಿ ಲಾಲಿಪುದು ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಬಾಲ ಶಶಿವಂಶೋದ್ಭವ ಕ್ಷಿತಿ । ಪಾಲಜನಮೇಜಯಗೆ ಮುನಿಕುಲ । ಮೌಳಿ ವೈಶಂಪಾಯನಾಖ್ಯನು । ಲೀಲೆಯಿಂದ ॥ ೧ ॥ ಆ ಮಹಾಭಾರತ ಪುರಾಣವ । ನಾ ಮಹೀಪತಿಗೊರೆಯೆ ಬಳಿಕ ಸ । ನಾಮನಂಘ್ರಿಯೊಳೆರಗು ತೆಂದನು । ಭೂಮಿಪಾಲ ॥ ೨ ॥ ರಾಜಸೂಯಾಧ್ವರದಿ ಚೈದ್ಯಮ । ಹಾ ಜರಾ ಸಂಧರನು ಜಯಿಸಿದು । ರಾಜಧರ್ಮಜ ಮೆರೆದ ಪರಿಯು ವಿ । ರಾಜಿಸೆನುತ ॥ ॥ ೩ ॥ ಭಕ್ತಿಯಿಂದಡಗೆಡೆದು ಕೇಳ್ದ ನೃ । ಪೋತ್ತಮುನನಾಲಿಂಗಿಸುತ ಮುನಿ । ಮತ್ತವಾರಣನೆಂದನತಿಶಯ । ದರ್ತಿಯಿಂದ ॥ ೪ ॥

ವಾರ್ಧಿಕ

ಭೂಪ ಕೇಳ್ ನಿನ್ನ ಪೂರ್ವಜರ ಪಾರಂಪರೆಯೊ । ಳಾ ಪಾಂಡು ಧೃತರಾಷ್ಟ್ರ ರೆಂಬರ ಸುತನುಜಾತ । ರಾ ಪಾಂಡವರ್ಗೆ ಕೌರವ ಜಗದಿ ಸೇರದಿರಲರಸನರಗಿನ ಮನೆಯೊಳು ॥ ತಾ ಪೊಗಿಸಿ ಕೌರವಂ ಕಪಟದುರಿಗೊಳಿಸುತಿರೆ । ಕಾಪಥದಿ

ಪೊರಟಯ್ದಿ ಬಕಹಿಡಿಂಬರ ಗೆಲ್ದು । ದ್ರೌಪದಿಯ ವೈವಾಹಮಂ ಗೆಯ್ದರಚ್ಯು ತನ ದಯದೊಳಾ ಕೌಂತೇಯರು ॥ ೧ ॥

ಭಾಮಿನಿ

ಬಳಿಕ ಧೃತರಾಷ್ಟ್ರವನಿಪತಿ ತ । ನ್ನಿಳೆಯ ಸಕಲೈಶ್ವರ್ಯಗಳ ತ । ನ್ನೊಳು ವಿಭಾಗವ ಮಾಡಿ ಕೊಟ್ಟನು ಧರ್ಮಜನ ಕರೆದು ॥ ನಿಲಿಸಲಿಂದ್ರಪ್ರಸ್ಥ ಪುರವರ। ದೊಳಗಮಲ ಸಾಮ್ರಾಜ್ಯಲಕ್ಷ್ಮಿಯು । ಬೆಳವಿಗೆಯೊಳಿವರಿರ್ದರನುಪಮ ರಾಜ ತೇಜದಲಿ ॥ ೧ ॥

ರಾಗ ಭೈರವಿ ಝಂಪೆತಾಳ

ಎಂತು ಬಣ್ಣಿಪೆನರಸ । ಕೌಂತೇಯರಿಹ ಸಿರಿಯಂ । ಸಂತಸವ ವಿವರಿಸಲ । ನಂತಗಸದಳವು ॥ ೧ ॥ ಸುರಪನೈಶ್ವರ್ಯಗಳ । ಮರೆಸಿತೇನೆಂಬ ಮುರ । ಹರನ ಕೃಪೆಯಿರಲವರ್ಗೆ । ಸರಿಯುಂಟೆ ಜಗದಿ ॥ ೨ ॥ ಪಾರ್ಥನೊಂದಿನ ವಖಿಳ । ತೀರ್ಥಯಾತ್ರೆಗೆ ನಡೆದು । ದೈತ್ಯಾರಿಯನುಜೆಯೊಡ । ನುತ್ಸವದಿ ಬರಲಂ ॥ ೩ ॥ ಆ ಸಂಭದ್ರೆಯೊಳು ಗುಣ । ರಾಶಿಯೆನಿಪಭಿಮಂನ್ಯು । ತೋಷ ದಿಂದುದಿಸಿ ಪರಿ । ತೋಷಗೊಳಿಸಂತಿರೆ ॥ ೪ ॥ ಖಾಂಡವನದಹನವನು । ಗಾಂಡೀವಿಸಹಿತೆಸಗಿ । ಪುಂಡರೀಕಾಕ್ಷ ಬೀ । ಳ್ಕೊಂಡ ದ್ವಾರಕೆಗೆ ॥ ೫ ॥

ದ್ವಿಪದಿ

ಇತ್ತ ಮಯಂನಚ್ಯುತನ ಮತದಿ ಮಂಟಪವ । ಚಿತ್ರಗಳ ನವರತುನ ಕನಕ ನಿರ್ಮಿತವ ॥ ೧ ॥ ಹತ್ತುಸಾವಿರ ತನ್ನ ಕೈಪ್ರಮಾಣದೊಳಂ । ವಿಸ್ತರಿಸಂತೆಡೆ ಗೆಡೆಗೆ ಚಿತ್ರಭವನಗಳಂ ॥ ೨ ॥ ಸುತ್ತುವಳಿಯದಿ ರತುನ ಮುತ್ತುಗಳ ಝಲ್ಲಿ । ಕೆತ್ತಿಸಿದ ಪರಿಪರಿಯ ವಸ್ತುವಲ್ಲಲ್ಲಿ ॥ ೩ ॥ ದೇವತಾರಚನೆಗಳಿಗೆಂಟು ಮಡಿ ಯೆನಿಸಿ । ತ್ರೈಮೂರ್ತಿಗಳ ಕಣ್ಗೆ ಚೋದ್ಯವೆಂದೆನಿಸಿ ॥ ೪ ॥ ಜೋಡಿಲ್ಲ ತ್ರೈಜಗ ದೊಳೆನಿಪ ಕೌತುಕವ । ಮಾಡಿ ಹದಿನಾಲ್ಕು ತಿಂಗಳೊಳು ಮಂಟಪವ ॥ ೫ ॥

ಭಾಮಿನಿ

ಕರೆಸಿದನು ಮಯಂನೆಂಟುಸಾವಿರ । ಸರಿಗರಕ್ಕಸಕಿಂಕರರು ನಿಜ । ಶಿರದೊ ಳಾಂತರು ತಂದರಿಂದ್ರಪ್ರಸ್ಥಪುರವರಕೆ ॥ ಅರಸನಿದಿರೊಳಂ ಮಂಟಪವ ತಂ । ದಿರಿಸಿದನಂ ಭೀಮಂಗೆ ಭಾರಿಯ । ವರಗದಾದಂಡವನು ಕಾಣಿಕೆಗೊಟ್ಟು ಪೊಡವಂಟ ॥ ೧ ॥

ರಾಗ ಸುರುಟಿ ಆದಿತಾಳ

ಕೇಳಿಮಸಂಜಾತ । ಸದ್ಗುಣ । ಪಾಲ ಹರಿಪ್ರೀತ ॥ ಕಾಲಾತ್ಮಜ ಕರು । ಣಾಳು ಸಮಸ್ತ ನೃ । ಪಾಲಾಧಿಪ ಗುಣ । ಶೀಲ ದಯಾಂಬುಧಿ ॥ ಕೇಳಿಮ ॥

॥ ೧ ॥ ನಿನ್ನೋಲಗಸಿರಿಗೆ । ಯೋಗ್ಯವಿ । ದೆನ್ನುವ ಬಗೆಯೊಳಗೆ ॥ ಸ್ವರ್ಣಾ ಕೃತಿ ಮಂ । ಟಪವನಂ ತರಿಸಿಹೆ । ಮನ್ನಿಸಿ ಕೈಗೊ । ಳ್ಳೆನ್ನಯಂ ಸೇವೆಯಂ ॥ ಕೇಳಿವು ॥ ೨ ॥ ಭೀಮನಿಗೀಗದೆಯು । ರಿಪುಸಂ । ಗ್ರಾಮದ ಜಯಸಿರಿಯು ॥ ಕ್ಷೇಮವು ನೃಪ ಕೇ । ಳೀ ಮಂಟಪಗಳ । ಸಾಮದಿ ಕೈಗೊಳಂ । ಭೂಮಿಪ ನೀನೆನೆ ॥ ಕೇಳಿವಂ ॥ ೩ ॥

ಭಾಮಿನಿ

ವಸಗೆ ಮೆರೆದಂದು ಮಯನ ನೃಪಮ । ನ್ನಿಸಿದನಂಡುಗೊರೆಯಂಗ ಚಿತ್ರ ದೊ । ಳಸಂರರನಂ ಕಳುಹಿಸುತ ಶುಭಲಗ್ನದಲಿ ಮಂಟಪಕೆ ॥ ವಸುಧೆಪತಿ ಬರುತಖಿಳ ಪ್ರಜೆ ರಂ । ಜಿಸಂತ ಮೆರೆವೋಲಗಕೆ ಕರುಣಾ । ರಸಭರಿತ ನಾರದನು ಬಿಜಯಂಗೆಯ್ದ ನಲವಿನಲಿ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಗಗನದಿಂದಿಳಿವರ್ಕನಂತೆ ಶೋಭಿಸಂತ ತ್ರೈ । ಜಗದಾಧಾರನೆ ಸಲಹೆನಂತ ॥ ಬಗೆಬಗೆಯಿಂದ ಕೀರ್ತಿಸಿ ತಾನು ವೀಣಾನಾ । ದಗಳಿಂದ ನುಡಿಸುತಯ್ತಂದ ॥ ॥ ೧ ॥ ಮುನಿಯಂ ದೂರದಿ ಕಾಣಂತನಂಜಸಂಕುಲ ಪೌರ । ಜನ ಸಹಿತಿದಿರು ಗೊಳ್ಳುತಲಿ ॥ ಕನಕಪೀಠವನಿತ್ತು ಪೂಜೆಗೆಯ್ದೆರಗಿರ್ಪ । ಜನಪನ ತೆಗೆದಪ್ಪ ತೆಂದ ॥ ೨ ॥ ಧರಣಿಪ ನಿನ್ನಂತೆ ಸಿರಿಯ ಸಾಮ್ರಾಜ್ಯದಿ । ಮೆರೆವವರಾರಂ ತ್ರೈ ಜಗದಿ ॥ ಕೊರತೆಯೊಂದೈಸೆ ನಿಮ್ಮಯ್ಯನು ಸ್ವರ್ಗದ । ಸಿರಿಗೆ ಯೋಗ್ಯತನಲ್ಲ ದಿಹನು ॥ ೩ ॥ ಆಗಲೆ ನಳನಹಂಷಾದಿ ಭೂಮಿಪರೆಲ್ಲ । ಯಾಗಾದಿ ಷಟ್ಕರ್ಮ ದಿಂದ ॥ ಸಾಗಿದರಮರಗದ್ದುಗೆಗೆ ಚಿಂತಾತುರ । ನಾಗಿಹ ಪಾಂಡುವಿಂತೆನಲಂ ॥ ॥ ೪ ॥ ಜೀಯ ಕೇಳಿದಕಿನ್ನುಪಾಯವೇನೆನ್ನುತ । ಲಾ ಯಮಸೂನಂ ಚಿಂತಿಸಲು॥ ರಾಯ ಲಾಲಿಸು ರಾಜಸೂಯಾಧ್ವರವ ಮಾಡು । ತ್ರಯ್ಯಗೆ ಕೊಡಿಸು ಸಂಪ ದವ ॥ ೫ ॥ ದ್ವಿಜರಾರಾಧನೆ ಯಾಗಾದಿಗಳಿಂದ ಸುರರೊಳು । ಯಂಜಮಾನತ್ವವ ಕೊಂಬ ಪಿತನು ॥ ತ್ರಿಜಗದಲ್ಲಣರೆಂಬಾತ್ಮಜರು ನೀವಿರುತಿರೆ । ವಿಜಯಂವಲ್ಲದೆ ಬೇರೇನುಂಟು ॥ ೬ ॥

ಭಾಮಿನಿ

ಮಂಸಿಯ ಮಾತಿನೊಳವನಿಪತಿ ಕಂ । ಬನಿಯಂ ತಾಳಂತ ಯಾಗದೀಕ್ಷೆಯಂ । ಮನದೊಳಗೆ ನಿಶ್ಚಯಿಸಿ ನಾರದಮುನಿಯ ಬೀಳ್ಕೊಟ್ಟು ॥ ನೆನೆನೆನೆದು ಚಿಂತಿ ಸಂತ ಸಿಂಹಾ । ಸನಕೆ ಧೌಮ್ಯಾದಿಗಳ ಬಾಂಧವ । ಜನಸಚಿವರನುಜಾದಿ ಮಂಖ್ಯರ ಕರೆದು ಬೆಸಗೊಂಡ ॥ ೧ ॥

ರಾಗ ಮಧ್ಯಮಾವತಿ ಏಕತಾಳ

ಮಾತ ಲಾಲಿಸಿ ಕೇಳಿ ನೀವೆಲ್ಲ । ವಾತಾತ್ಮಜಃದ್ಯರೀ ರೀತಿಯಂನೆಲ್ಲ ॥ ಮಾತ ॥ ॥ ಪ ॥ ಸ್ವರ್ಗದೊಯ್ಭವದೊಳಂ ಸೇರಲೆಮ್ಮಯ್ಯನಂ । ಯೋಗ್ಯ ತಾನಲ್ಲದೆ ತೊಳಲ್ವನಂತೆ ॥ ಶೀಘ್ರದಿ ರಾಜಸೂಯಾಧ್ವರ ಕೈಗೊಂಡು । ಸದ್ಗತಿ ಮಾಡೆಂದು ಪೇಳ್ದ ನಾರದನಿಂದು ॥ ಮಾತ ॥ ೧ ॥ ಸತ್ತ್ವಸಾಹಸಗುಣ ಕೀರ್ತಿ ಭೂತಳದಿ ಸ । ವಂಸ್ತ ಐಶ್ವರ್ಯದಿಂದೇನಂ ಫಲ ॥ ಪುತ್ರರಿದ್ದಯ್ಯಗೆ ಮುಕ್ತಿ ಯಾಗದ ಮೇಲೆ । ವ್ಯರ್ಥವೆಮ್ಮಯ ಬಾಳ್ವೆ ಪೃಥ್ವಿಯೊಳೆನಲಂದಂ ॥ ಮಾತ ॥

ರಾಗ ಭೈರವಿ ಅಷ್ಟತಾಳ

ಅನುಮಾನವೇನು ಜೀಯ । ದೀಕ್ಷಿತನಾಗು । ಮನದಿ ಚಿಂತಿಸದಿರಯ್ಯ ॥ ಕ್ಷಣಮಾತ್ರದಿಂದಲೆಂದನಿತಂ ಸಾಹಿತ್ಯವ । ನಿನಗೊದಗಿಸುವೆನೆಂದೆನೆ ಪಾರ್ಥ ನುಡಿದನಂ ॥ ೧ ॥ ಲಾಲಿಸಿ ಕೇಳೆಮ್ಮವ । ರಕ್ಷಿಪ ವನ । ಮಾಲಿಯೊಳಿದ ನೆಲ್ಲವ ॥ ನಾಲೋಚನೆಯನೆಸಗುವದಾತನಪ್ಪಣೆ । ಕೇಳಿ ನಿಶ್ಚಯಿಪುದೆಂದೆನ ಲೆಂದ ಯಮಜನು ॥ ೨ ॥ ಲೇಸು ಲೇಸಿನಿತೆಲ್ಲವ । ಕರೆಸಿ ಕೇಳ್ವ । ವಾಸು ದೇವನ ಮತವ ॥ ಬೇಸರದನಂವ ಬಿನ್ನಯಿಂಸುವುದೆನುತವ । ನೀಶದೂತರೊಳು ವಿಲಾಸದಿಂದೊರೆದನು ॥ ೩ ॥ ಚರರಂ ನೀವತಿ ಬೇಗದಿ । ದ್ವಾರಕೆಗಯ್ದಿ । ಕರುಣಾಳಂವಿನ ಶೀಘ್ರದಿ ॥ ಅರುಹಿ ದೈನ್ಯದಿ ಕರೆತರುವುದೆಂದಿತ್ತನಂ । ಪರಿಪರಿ ವಸ್ತುವ ಹರಿಗೆ ಕಾಣಿಕೆಗೆಂದಂ ॥ ೪ ॥

ಭಾಮಿನಿ

ಬಳಿಕ ಪರಿಪರಿ ವಸ್ತುಗಳ ಕಯ್ । ಗೊಳಂತಲತಿ ಬೇಗದಲಿ ದೂತರು । ಜಲನಿಧಿಯ ಕಳೆದೆಸೆವ ದ್ವಾರಾವತಿಗೆ ನಡೆತಂದು ॥ ಲಲನೆಯರ ಮಧ್ಯದಲಿ ಭಕ್ತಾ । ವಳಿಶಿರೋಮಣಿರತುನನಿರೆ ಪದ । ಗಳಿಗೆರಗಿ ಕಯ್ ಮುಂಗಿದಂ ಕಾಣಿಕೆಗೊಟ್ಟು ಪೇಳಿದರಂ ॥ ೧ ॥

ರಾಗ ಮಧುಮಾಧವಿ ಏಕತಾಳ

ದೇವಾದಿದೇವರ ದೇವನೆ ಕೇಳು । ಕಾವುದೆಮ್ಮನು ಚೆಲ್ವ ಪರಮಂ ಕೃಪಾಳು ॥ ದೇವಾ ॥ ಪ ॥ ಪಾಂಡವರೀಪರಿ ಕಾಣಿಕೆ ಸಹಿತ । ಪುಂಡರೀಕಾಕ್ಷನ ಪದಗಳಿ ಗಿನಿತ ॥ ಕಂಡೆರಗಿದಂ ಕರೆತನ್ನಿರೆಂದೆನುತಾ । ಮಂಡಲಾಧಿಪ ಕಳುಹಿಸಿದ ಕೇಳ್ ಮಾತ ॥ ದೇವಾ ॥ ೧ ॥ ತಮ್ಮತವೊಳ್ಮಳಂ ಸುರಮುನಿಯೊಡಗೂಡಿ । ಧರ್ಮ ಜಾದಿಗಳೊಂದಂ ವಿಷಯಃ ಮಾತಾಡಿ ॥ ನಿಮ್ಮೊಳಂ ಕಾರ್ಯವುಂಟೆಂಬುದ ಪೇಳಲ್ಕೆ । ನಮ್ಮನಟ್ಟಿದ ಕರೆತನ್ನಿ ನೀವೆಂದು ॥ ದೇವಾ ॥ ೨ ॥

ಭಾಮಿನಿ

ಕೇಳಿ ನಸುನಗುತಚ್ಯುತನು ಶಿಶು । ಪಾಲ ಖಳ ಮಗಧಾದ್ಯರಿಗೆ ಕಡೆ । ಗಾಲ ಬಂತೆಮ್ಮಯ ಮನೋರಥಸಿದ್ಧಿ ಲೇಸೆನುತ ॥ ಶ್ರೀಲಲಾಮನು ನಿಖಿಳ ಯಾದವ । ಜಾಲವನು ಪುರವರಕೆ ನಿಲಿಸಿ ಕೃ । ಪಾಳು ನಿಜಭಕ್ತರನು ಕಾಂಬು ತ್ಸವದಿ ಹೊರವಂಟ ॥ ೧ ॥

ವಾರ್ಧಿಕ

ಕಶ್ಯಪವಸಿಷ್ಠಾದಿ ಸಕಲ ಮುನಿ ಮುಖ್ಯರಾ । ಲಸ್ಯವಿಲ್ಲದೆ ಮಾಳ್ಪ ತಪ ಸಮಾಧಿಗಳಿಂಗ । ದೃಶ್ಯನೆನಿಸಿದ ಪರಂಜ್ಯೋತಿ ಸ್ವರೂಪಮೀ ಕುಂತೀಕುಮಾರ ಕರ್ಗೆ ॥ ವಶ್ಯನಾಗಿಹನೆಂತೊ ಶಿವ ಶಿವಾ ನೀಲಮೇ । ಘಶ್ಯಾಮಳನ ಲೀಲೆ ಪೊಸತೆಂದು ಸುರರುಲಿಯೆ । ಸುಶ್ಯಾಲಕಂ ಸುಪರ್ಣಾರೂಢನಾಗಿ ಕಡುಬೇಗ ದಿಂದಯ್ತಂದನು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಭಕ್ತರಿಗೆ ತಾ ಸುಲಭನೆನಿಪ ವಿ । ಚಿತ್ರನರನಾಟಕವ ತೋರಿಸು । ತರ್ತಿಯಲಿ ನಡೆತಂದನಿಂದ್ರ । ಪ್ರಸ್ಥ ಪುರಕೆ ॥ ೧ ॥ ಮುರಹರನ ಬರವರಿದು ಧರಣೀ । ವರನಿದಿರ್ಗೊಂಡನುಜಸಂಕುಲ । ವೆರಸಿ ಬಂದಚ್ಯುತನ ಚರಣದೊ । ಳೆರಗೆ ಕಂಡು ॥ ೨ ॥ ನಗುತ ಪಾಂಡುಕುಮಾರವರ್ಗವ । ತೆಗೆದು ತಕ್ಕವಿಸುತಲಿ ಬಂದೋ । ಲಗದಿ ಕುಳಿತಿಂತೆಂದನೈವರ । ಮೊಗವ ನೋಡಿ ॥ ೩ ॥ ದುಗುಡವೇನೈ ಪೇಳಿರೀ ಪರಿ । ಮೊಗದ ಸಿರಿ ಕುಂದಿರ್ಪುದೇನೆನೆ । ಲೊಗುವ ಕಂಬನಿಯಿಂದ ಯಮಜಾ । ದಿಗಳು ನಮಿಸೆ ॥ ೪ ॥

ಕಂದ

ಚಿಂತಿಸಿ ಮಣಿದವದಿರನು ಮು । ರಾಂತಕನೊಲಿದೆತ್ತಿ ದಯಂದಿ ಮನ್ನಿಸಿ ಬಳಿಕಂ ॥ ಕೌಂತೇಯರೊಳಾ ಲಕ್ಷ್ಮೀ । ಕಾಂತನು ನಸುನಗುತಲೊರೆದ ನೇಕಾಂತದೊಳಂ ॥ ೧ ॥

ರಾಗ ಕೇದಾರಗೌಳ ಝಂಪೆತಾಳ

ಏನು ಕರೆಸಿದಿರೆಮ್ಮನು । ಮನಸಿನೊಳ । ಗೇನು ಯೋಚಿಸಿದಿರಿನ್ನು ॥ ದಾನವರು ಕೌರವರೊಳು । ಬಂದೆಡರಿ । ದೇನಿರ್ದರುಸಿರಿಯೆನಲು ॥ ೧ ॥ ದನುಜರೊಳು ಕೌರವರೊಳು । ಭಯಮೆ ನಿ । ಮ್ಮನುಪಮದ ಕರುಣವಿರಲು ॥ ಜನಕಗಮರೇಂದ್ರಸಭೆಯು । ಇಲ್ಲೆಂದು । ಮುನಿಯೆಮ್ಮೊಳೆಂದ ನುಡಿಯು ॥ ॥ ೨ ॥ ಅದಕೆ ರಾಜಾಧ್ವರದೊಳು । ಪಿತಗೆ ಸುರ । ಪದವಿಯುಹುದೆಂದ ಕೇಳು ॥ ಇದನೆಸಗದಿರಲು ಸುತರು । ನಾವಿದ್ದು । ಬದುಕಿ ಫಲವೇನಯ್ವರು ॥ ೩ ॥

ಕಯ್ಗೊಂಡೆನೀ ವ್ರತವನು । ಮುನಿಪ ಸುರ । ಲೋಕಸಹಿತಿದ ಪೇಳ್ವನು ॥ ಈ ಕ್ರತುವ ಮಾಡದಿರಲು । ಪಾಪ ತ್ಮೈ । ಲೋಕ ಪರಿಹಾಸ ಕೇಳು ॥ ೪ ॥

ಭಾಮಿನಿ

ಯಾಗವನು ಪೂರಯಿಸುತೀ ಭವ । ಸಾಗರವ ನೀ ದಾಂಟಿಸೆನುತಲಿ । ರಾಗದಲಿ ಪೊಡಮಟ್ಟ ಭೂಪನನೆತ್ತಿ ನಸುನಗುತ ॥ ಸಾಗರಾಂತದ ನೃಪರ ಗೆಲದೀ । ಯಾಗಕೊದಗುವರುಂಟೆ ಮುನಿಯು ನಿ । ಯೋಗದಲಿ ಮರುಳಾದಿರಕಟಕಟೆಂದನಸುರಾರಿ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇದರೊಳಾರೀ ಭೂತಳಂಗಳ । ಸದೆದು ಜಯಿಸುವ ಭಟರ ತೋರಿಸು । ಸುದತಿಯರ ಮುಂದುಬ್ಬಿದೈ ನಾ । ರದನ ನುಡಿಗೆ ॥ ೧ ॥ ಕೌರವರು ನಿನ್ನವರು ವಿಘ್ನವ । ತಾರದಿಹರೇ ಬಳಿಕ ಖಳ ಪರಿ । ವಾರವದೆ ಮಗಧಾದಿ ಭಟಕುಲ । ವಾರಿಧಿಗಳು ॥ ೨ ॥ ಕಾಲಯುವ ಮುರ ನರಕ ಪೌಂಡ್ರಕ । ಸಾಲುವಾದ್ಯರ ಗೆಲಿದು ಮಾವನ । ಬೀಳುಗೆಡಹಿದ ಬಳಿಕ ಪೊರಟನು । ಖೂಳ ಮಗಧ ॥ ೩ ॥ ಭೂರಿದಿನ ಹೊಯ್ದಾಡಿ ಸೋತೆನು । ಘೋರ ಮಾಗಧನಿಂದ ಭಯದೊಳು । ವಾರಿಧಿಯ ಮಧ್ಯದಲಿ ಕಟ್ಟಿದೆ । ನೂರ ಕೇಳು ॥ ೪ ॥ ಯಾಗ ತಾನಿದ್ದಿದನು ತೊಡಗಲು । ಮಾಗಧನು ಸೈರಿಪನೆ ಚೈದ್ಯನು । ಹಾಗರುವ ಮಾಗಧನ ಜಯಿಸಲು । ಸಾಗದಯ್ಯ ॥ ೫ ॥

ವಾರ್ಧಿಕ

ಜಗದಖಿಳ ರಾಯರುಂ ಗೆಲ್ದೆಯಾದರು ಚೈದ್ಯ । ಮಗಧರಿವರಿಬ್ಬರುಂ ಜಯಿಪರಾರುಂಟು ತ್ಮೈ । ಜಗದಿ ಯಾಗಾದಿ ಷಟ್ಕರ್ಮನಾಶನರಿದರೊಳಗ್ಗಳಿಯು ಸಾಮರ್ಥ್ಯದಿ ॥ ಮಿಗಿಲಾ ಜರಾಸಂಧವಧೆ ನಿಮ್ಮೊಳಸದಳವು । ನಗೆಗೇಡನೆಸಗದಿರಿ ನೀವೆಂದು ಪೇಳೆ ಭಂಗಂ । ಭುಗಿಲೆಂಬ ರೋಷಾಗ್ನಿಯಿಂದ ಗರ್ಜಿಸುತನಿಲಸಂತನೆಂದಚ್ಯುತನೊಳು ॥ ೧ ॥

ರಾಗ ಭೈರವಿ ಏಕತಾಳ

ಬಂದುದೆ ವ್ರತಭಂಗಗಳು । ಮಗ । ಧೇಂದ್ರ ಬಲಾಢ್ಯನೆ ತಾಳು ॥ ಕೊಂದಿಡುವೆನು ಖಳನೊಡಲಾ । ಕ್ಷಣ । ದಿಂದಲೆ ತಾ ವೀಳ್ಯಗಳ ॥ ೧ ॥ ನಿನ್ನೊಳು ಹಗೆಯೆನಿಪರನು । ಸುರ । ಕನ್ನೆಯರೊಳು ತೋರುವೆನು ॥ ಇನ್ನೇನತಿ ಕಪ್ಪವನು । ಕ್ರತುಕೆ । ಸನ್ನಾಹವ ತರಿಸುವೆನು ॥ ೨ ॥ ಪರಿಕಿಸೆನುತ ಮೀಸೆಗಳ । ತಾ । ತಿರುಹುತಲತಿ ಭಾಷೆಗಳ ॥ ಅರುಹಿಸಲರ್ಜುನ ಕೆರಳಿ । ಬೊ । ಬ್ಬಿರಿದೆಂದನು ರೋಷ

ದಲಿ ॥ ೩ ॥ ನವಖಂಡದಿ ಮೆರೆದಿರುವ । ನೃಪ । ನಿವಹವ ಸೋಲಿಸುತೆಸೆವ ॥ ನವರತ್ನಂಗಳ ಹೊರೆಯು । ಹೊರಿ । ಸುವೆ ನೀ ನೋಡೀ ಪರಿಯು ॥ ೪ ॥ ಏಕೀ ಗಾಂಡೀವಗಳು । ರಥ । ನಾಕಾಧಿಪರಸ್ತ್ರಗಳು ॥ ಈ ಕೀರ್ತಿಗಳಿಂದೇನು । ನೃಪಾ । ನೀಕವ ಜಯಿಸದಡಿನ್ನು ॥ ೫ ॥ ಕೂಡಿಸು ದ್ವಿಜಸಂಕುಲವ । ಕೈ । ಗೂಡಿಸು ದೀಕ್ಷಾಧ್ವರವ ॥ ಓಡಲಿ ಬರೆದೋಲೆಗಳು । ತಡ । ಮಾಡದೆಸಲ್ಕೆ ದಯಾಳು ॥ ೬ ॥

ರಾಗ ಶಂಕರಾಭರಣ ತ್ರಿವುಡೆತಾಳ

ವಿಹಿತವೀ ನುಡಿ ಕ್ಷತ್ರಿಪಂಥಕೆ । ಸಹಜವೈಸೇ ಜೈಸುವ ॥ ಸಹಸಿಗಳು ನೃಪ ದೀಕ್ಷೆಗಳ ಸ । ನ್ನಹವ ಮಾಡ್ಯೆ ॥ ೧ ॥ ಎಮಗೆ ಭೀಮಾರ್ಜುನರ ಕೊಡು ರಿಪು । ರಮಣಿಯರ ವೈಧವ್ಯವ ॥ ನಿಮಿಷದಲಿ ತರಿಸುವೆನು ಬರಿಸುವೆ । ನವನಿಪರನು ॥ ೨ ॥ ಮಾಗಧನ ವಧೆಯಿಂದಲಾಯಿತು । ಯಾಗವೆಂದು ಪೇಳಲು ॥ ಆ ಗರುವನುದ್ಭವವ ಪೇಳೆನು । ತಾಗ ನೃಪತಿ ॥ ೩ ॥ ಕಂಗಳನ್ನರಳಿಚುತೊರೆದ ನಿ। ನ್ನಂಘ್ರಿಗಳನು ಸೇವಿಸೆ ॥ ಭಂಗವುಂಟೇ ಪೇಳು ಮಗಧ ಪ್ರ । ಸಂಗವೆನಲು ॥ ೪ ॥

ವಾರ್ಧಿಕ

ಅರಸ ಕೇಳ್ ಮಗಧಪುರದವನಿಪಬೃಹದ್ರಥಗೆ । ತರಳರಿಲ್ಲದೆ ಕೌಶಿಕನು ಕೊಟ್ಟು ಫಲವ ತ । ನ್ನರಸಿಯರಿಗಿತ್ತಡೀರ್ವರು ತಿಂದು ಸೀಳಿರಡ ಪಡೆಯೆ ದುಗುಡದೊಳದರನು ॥ ಹೊರವಳಯದೊಳು ಬಿಸುಡಲಿರುಳು ಜರೆಯೆಂಬ ವಳು । ಒರಂತದರ ಕೂಡಿಸಲು ತರಳರೂಪಾಗೆ ನೃಪ । ವರನ ಕರದಿವ ಜರಾಸಂಧನೆಂದಿತ್ತಡವ ಸಲಹಲತಿಶಯನಾದನು ॥ ೧ ॥

ಭಾಮಿನಿ

ತ್ರಿಜಗದಲ್ಲಣನಿಪನ ಮುರಿದ । ಲ್ಲದೆ ನೃಪಾಲಕರಂಜಿ ಕಪ್ಪವ । ನೊದಗಲರಿಯರು ಯಾಗಮಂಟಪಕವನಿಪತಿ ಕೇಳು ॥ ಇದು ನಿಧಾನವು ಭೀಮಪಾರ್ಥರಿ । ಗಿದು ಮುಹೂರ್ತವು ಪೀಳೆಯುವ ತಾ । ಕದನ ವಿಜಯದ ವೀರ ಸೇಸೆಯನಿಕ್ಕಿ ಕಳುಹೆಂದ ॥ ೧ ॥

ರಾಗ ಭೈರವಿ ಝಂಪೆತಾಳ

ತರಳರೆಮ್ಮನುಜರಿವ । ರರಿಯದವರಲಿ ಕೃಪೆಯು । ನಿರಿಸು ನಮ್ಮಯ ಪ್ರಾಣ । ದರಸ ನೀನೈಸೆ ॥ ೧ ॥ ಕ್ರತುವಿದರನುದ್ಧರಿಸು । ವಸಿಭಾರ ನಿನಗೆನುತ । ಸ್ತುತಿಸುತಡಗೆಡೆದ ಮುರ । ಮಥನನಂಘ್ರಿಯಲಿ ॥ ೨ ॥ ಪೃಥ್ವಿಪನ ಶಿರವ ಪಿಡಿ । ದೆತ್ತಿ ಚಿಂತಿಸಲೇಕೆ । ಉತ್ತರರೋತ್ತರವಾಯ್ತೆ । ನುತ್ತ ಹರಸಿದನು ॥ ೩ ॥

ಭಾಮಿನಿ

ಪಾಳೆಯುವ ಬರಹೇಳಂ ಭೂಪರಿ । ಗೋಲೆಯುಂಡುಗೊರೆ ಸಹಿತ ಕಳುಹಿಸು । ಕೇಳೆನಲು ಕಲಿಭೀಮಂಪಾರ್ಥರು ಶುಭಮುಹೂರ್ತದಲಿ ॥ ವೀಳೆಯುವ ಕೈಗೊಂಡು ಪಾತಕ । ಜಾಲಸಹಿತತಿ ಪಾದ್ಮರಭಸದಿ । ಬೀಳುಗೊಂಡರನೇಕ ಬಲ ಸಹಿತಚ್ಯುತಾಜ್ಞೆಯಂಲಿ ॥ ೧ ॥

ರಾಗ ಕಾಂಭೋಜಿ ಝುಂಪೆತಾಳ

ಪೊಡವಿಪತಿ ಕೇಳಿಂತು ಭೀಮಕೃಷ್ಣಾರ್ಜುನರು । ಪಡೆಸಹಿತ ಪೂರ್ವಮುಖವಾಗಿ ॥ ನಡೆದು ಪಯಣದವೇಲೆ ಪಯಣದಲಿ ಮಗಧನೃಪ । ಪೊಡವಿಯನು ಪೊಕ್ಕರತಿಜವದಿ ॥ ೧ ॥ ಪಾಳೆಯುವ ಪರ್ವತದ ಬುಡದದೊಳಿರಿಸುತ್ತದರ । ಮೇಲಿವರು ಮೂವರಡಹಾಯ್ದು ॥ ಶೈಲಾಗ್ರದೊಳಗೆಸೆವ ಭೇರಿತ್ರಯಂಗಳನು । ಬೀಳಹೊಯ್ದೆಬ್ಬಿಸಿದರಂದು ॥ ೨ ॥ ಆ ಶಬ್ದ ಕೇಳೆಯುದುರಲಿತ್ತ ನಡುವಿರುಳು ಮಗ । ಧೇಶ ಕೈಗೊಂಡು ಯಾಗದಲಿ ॥ ಭೂಸುರಾರ್ಚನೆಗಳಲಿ ದಾನಗಳ ಕೊಡುವೆಡೆಯೊ । ಳೀ ಶಬ್ದ ಕೇಳಿ ಬೆರಗಿನಲಿ ॥ ೩ ॥ ಆ ರಾತ್ರಿಯೊಳಗಿವರು ಸೂರೆಗೊಂಡಿರದಯ್ದಿ । ಮೂರುಕೋಟೆಯು ಮುರಿದು ದ್ವಿಜರಾ ॥ ಕಾರದೊಳಗಿವರು ಮೂವರು ಪೊಕ್ಕರವರಪರ । ದ್ವಾರದೊಳು ಯಾಗ ಮಂದಿರವ ॥ ೪ ॥

ಭಾಮಿನಿ

ಕೌಶಿಕರ ಕಂಡೆದ್ದು ಮಗಧನೃ । ಪಾಲ ಮಧುಪರ್ಕಾದಿ ಪೂಜೆಯು । ಮೇಳವಿಸಿ ಸಭೆಸಹಿತಯೆವೆಯಿಂಕ್ಕದೆ ನಿರೀಕ್ಷಿಸುತ ॥ ಪೇಳಿರೈ ನಿಮಗಾವ ದೇಶ ವಿ । ಶಾಲ ಗೋತ್ರವದಾವುದೆನುತ ವಿ । ಲೋಲಮತಿ ಚಿಂತಿಸಿದನಿವದಿರು ವಿಪ್ರರಲ್ಲೆಂದು ॥ ೧ ॥

ರಾಗ ಯರಕಲಕಾಂಭೋಜಿ ಝುಂಪೆತಾಳ

ಯಾರಿವದಿರೆಂದೆಂಬುದರಿಯದಾಯ್ತೆನಗೆ । ಕಾರಣೀಕರುಯೆಂದು ತೋರುತಿದೆ ಮನಕೆ ॥ ಪ ॥ ಸತ್ವಭುಜಬಲಯುತರು । ಶಸ್ತ್ರವಿದ್ಯರು ಕಪಟ । ಋತ್ವಿಜರು ತನಗಿವರು । ಶತ್ರುವೆನಿಸಿಹರು ॥ ವೃತ್ರಾರಿಯಂಜಭವ ಸ । ಮಸ್ತ ದೇವರೊಳಿವರು । ಪೃಥ್ವಿಯೊಳಗಿಲ್ಲತಿ ಸ। ಮರ್ಥರೆಮಗಿದಿರು ॥ ೧ ॥ ಆ ದಂತಿಪುರದವರು । ಆಪ್ತಜನ ಪಾಂಡವರು । ಕಾದಲಯ್ತುಹರಲ್ಲ । ಕಾಣೆ ವಿಂಕ್ಕವರ ॥ ಯಾದವರೊಳಿಲ್ಲ ತುರು । ಗಾದ ರಣಹೇಡಿಯುಹ । ಮಾಧವನದಂತಿರಲಿ । ಮಾತನಾಡಿಸುವೆ ॥ ೨ ॥

ರಾಗ ಕೇದಾರಗೌಳ ಅಷ್ಟತಾಳ

ಇತ್ತಲೀಗಪರರಾತ್ರಿಯೊಳೇನು ಕಾರ್ಯ ನಿ । ಮಿತ್ತದಿ ಬಂದಿರಯ್ಯ ॥ ಕೃತ್ರಿಮರೊ ಸಹಜರೋ ನೀವು ಬೆದರದೆ । ಬಿತ್ತರಿಸುವುದೆನಲು ॥ ೧ ॥

ರಾಗ ಶಂಕರಾಭರಣ ಏಕತಾಳ

ಶತ್ರುಗಳಿಗೆ ತಮ್ಮ ನಿಜದ । ಸತ್ಯವಚನ ಮಾರ್ಗಗಳನು । ಬಿತ್ತರಿಸಲರಿದು ವೇದ । ಶಾಸ್ತ್ರವು ಮಗಧ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ವೈರಿಗಳೆ ನಾವು ನಿಮಗೆ ವೈರತ್ವಕ್ಕೆ । ಕಾರಣವೇನುಸಿರಿ ॥ ತೋರುತಲಿದೆ ಕಪಟಾಕೃತಿ ಮಿಗೆ ನಿಮ್ಮಾ । ಕಾರವು ಹೋಗದಲೆ ॥ ೧ ॥

ರಾಗ ಶಂಕರಾಭರಣ ಏಕತಾಳ

ಭೂರಿ ನೃಪರ ಸೆರೆಯೊಳಿಟ್ಟು । ತೋರಿಸಿದ್ದ ಕೃತ್ಯದಿಂದ । ವೈರ ನಿನ್ನೊಳಿನ್ನಾ ನೃಪರ । ಸೆರೆ ಬಿಡು ಮಗಧ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ನೀನಾ ನೃಪರಿಗೆ ತಮ್ಮನೊ ಮೊಮ್ಮನೊ । ಸೂನುವೊ ಬಾಂಧವನೊ ॥ ಏನೆಂಬೆನ್ನೈ ಸೆರೆ ಬಿಡುಗಡೆಗೀಪರಿ । ನೀ ನೆನೆದದುಭುತವ ॥ ೧ ॥

ರಾಗ ಶಂಕರಾಭರಣ ಏಕತಾಳ

ಎಲವೊ ಧರೆಯು ಧರ್ಮಾದಿಗಳ । ಸಲಹಿ ಖಳರ ತಲೆಯ ಕೊಂಬು । ದಿಳೆಯ ಶಿಕ್ಷೆ ರಕ್ಷೆ ನಮಗೆ । ತಿಳಿದುಕೊ ಮಗಧ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಬಾಯಿಗೆ ಬಂದಂತೀಪರಿ ಬಗುಳಿದು । ಸಾಯದಿರಧಮರಿರ ॥ ನಾಯಕ ರೈಸಲೆ ಸಜವಿದು ನಿಮ್ಮಭಿ । ಪ್ರಾಯವ ಹೇಳೆನಲು ॥ ೧ ॥

ಭಾಮಿನಿ

ಕೇಳಿ ಮಾಡುವುದೇನು ತಾನಸು । ರಾಳಿಧೂಳೀಪಟಲ ವೈರಿನೃ । ಪಾಲ ಚೌಪಟಮಲ್ಲನೀತನು ಭೀಮಸೇನ ಕಣಾ ॥ ಭಾಳನೇತ್ರನ ಭುಜಬಲದ ಸಮ । ಪಾಳಿಯರ್ಜುನದೇವ ನೋಡೈ । ಕಾಳಗವ ಕೊಡು ನಮ್ಮೊಳನಿಬರೊಳೆಂದ ನಸುರಾರಿ ॥ ೧ ॥

ಕಂದ

ಕೇಳ್ದಾ ಕಿರುನಗೆಯಿಂ ಬಿ । ದ್ದೇಳ್ದರೆ ರೋಮಾಂಚನದೊಳು ಬೆಕ್ಕಸಬಡುತಂ ॥ ತಾಳ್ದನು ನಸುನಗೆ ಹಾಸ್ಯದಿ । ಪೇಳ್ದಂ ಮಹಾಜನರಿದಿರೊಳು ಸಭೆಯೊಳಗಾಗಂ ॥ ೧ ॥

ರಾಗ ನೀಲಾಂಬರಿ ರೂಪಕತಾಳ

ತಿಳಿಯದಾದಿರೆ । ನಮ್ಮ ಕಂಸಗೆ । ಅಳಿಯನೀತನು । ನಮಗೆ ಮೊಮ್ಮನು ॥ ಲಲನೆ ದೇವಕಿ । ಯಣುಗ ಚೋರರ । ಕುಲಶಿರೋಮಣಿ । ಯೆಂಬರೀತನ ॥ ॥ ೧ ॥ ಆದಲೇನದ । ಹಿಂದೆ ನಮ್ಮೊಳು । ಮಾಡಿ ಕಲಹದಿ । ಮರಳಿ ಯುದ್ಧದಿ ॥ ಓಡಿ ಬದುಕಿದ । ಭಂಡನಿವನೆನು । ತಾಡಿ ಕೃಷ್ಣನ । ನೋಡು ತೆಂದನು ॥ ೨ ॥ ಎಲವೊ ಸೂಳೆಯ । ರಾಟಕೂಟವೊ । ಕೊಳಲಗಾನವೊ । ಪಶುಸಮೂಹವೊ ॥ ಬಲಂ ಸರಳ್ಗಳ । ಬಾಹುಬಲಗಳ । ತಿಳಿವೆಯೆಂತೆಲೊ । ಸದರವಲ್ಲೆಲೊ ॥ ೩ ॥ ಹಂಸಡಿಬಿಕರ । ಕಂಸಬಲಗಳ । ಹಿಂಸೆ ಗೆಯ್ವುದ । ತೋರಬಂದೆಜು ॥ ಧ್ವಂಸಮಾಳ್ಪೆನು । ಹುಲಿಗೆ ಪಶುಗಳ । ವಂಶ ಸಿಕ್ಕಿದ । ತೆರದಿ ಕೆಟ್ಟೆಲಾ ॥ ೪ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಚಂದಮುಖನೆ ಕೇಳ್ ಪಿತ್ತವೋ ಮ । ದ್ಯದ ವಿಕಾರವೊ ಭಂಗಿ ತಲೆಗೇ । ರಿದುದೊ ಭಟನಾದರೆ ವಿಘಾತಿಯ । ಲೊದಗಂ ರಣಕೆ ॥ ೧ ॥ ಸದನ ನಿನ್ನದಂ ಸೂಳೆಯರ ಮಂ । ದೊದರಲೇತಕೆ ನಿಮಿಷದೊಳಂ ಬಂ । ದಿದೆ ಮರಣ ನಿನ ಗೆಂದು ನುಡಿದನು । ಪದುಮನಾಭ ॥ ೨ ॥ ಎಲವೊ ಗೋಪಕುಮಾರ ಕಂಸನ । ಲಲನೆಯರ ವೈಧವ್ಯದುಃಖಾ । ನಲನ ನಂದಿಸಲಾಯ್ತು ನಿನ್ನಯ । ತಲೆಯಂ ರುಧಿರ ॥ ೩ ॥ ಕಾಲಯವ ಕಂಸಾದಿ ನೃಪದ್ಯೆ । ತ್ಯಾಳಿಯಂಸು ನಿಮಿಷದಲಿ ನಿನ್ನನು । ಸೀಳಿ ತೆಗೆವೆನೆನುತ್ತ ಗಜರಿ ಕ । ರಾಳನಾಗಿ ॥ ೪ ॥ ಗೋವಳರಂ ನಿರ್ಲಜ್ಜರಿದರೊಳು । ನೀವು ಗರುವರು ರಾಜಪುತ್ರರು । ಸಾವ ಬಯಸಂವ ನೊಡನೆ ಬಂದಿರಿ । ರೀವಿ ಲೇಸಂ ॥ ೫ ॥ ಹಂಡುಗರ್ಮೈ ನಿಮಗಿದಕೆ ನೀತಿಯಂ । ನುಡಿವರಿಲ್ಲದೆ ವ್ಯರ್ಥ ನಮ್ಮೊಳು । ಮುಡಿವಿರೆಂದಬ್ಬರಿಸಲಾತಗೆ । ನಂಡಿದ ಭೀಮ ॥

ರಾಗ ಭೈರವಿ ಏಕತಾಳ

ದುಷ್ಟನೆ ಬಗುಳುವುದೇಕೆ । ನಿ । ನ್ನಿಷ್ಟಕೆ ಮೆಚ್ಚೆವು ಧುರಕೆ ॥ ಧಿಟ್ಟತೆ ಯುಂಟೇ ಪೇಳು । ಹಿ । ಮ್ಮೆಟ್ಟದೆ ನೀ ತೋರೇಳು ॥ ೧ ॥ ಸರಸವೆ ಶ್ರೀಕೃಷ್ಣನೊಳಂ । ಶ್ರೀ । ಹರಿ ನಿನಗೆಣೆಯೇ ತಾಳು ॥ ಅರೆನಿಮಿಷದಿ ನಿನ್ನವನು । ಬಡಿ । ದುರುಳಿಪೆನೆನೆ ಪೇಳಿದನು ॥ ೨ ॥ ಗೋವಳನಿವನೊಡಗೂಡಿ । ನೀವ್ । ಸಾವನಂ ನೆನೆದಿನಿತಾಡಿ ॥ ಕೇವಲ ಮಡಿವಿರಿ ಧುರದಿ । ನಿಮ್ಮ । ಕಾಯ್ವರ್ ಯಾರೀ ಜಗದಿ ॥ ೩ ॥ ಹರಿ ಸಹಿತಲಿ ಕಾದುವಡೆ । ಪಡೆ । ವೆರಸಿ ಬಹುದಂ ಸಾಲದಡೆ ॥ ತರಿಸಿ ಕೊಡುವೆನಾಯುಂದವ । ಮೂ । ವರೊಳೊದಗುವೆ ನಾ ರಣವ ॥ ೪ ॥

ರಾಗ ಭೈರವಿ ಅಷ್ಟತಾಳ

ಎಲವೋ ಮಾಗಧನೆ ಕೇಳಂ । ಸರ್ವರ ಗೆಲ್ದು । ಬಲುಂವ ತೋರದಿರೆನೊ ಳಂ ॥ ಕಲಹಕೆಮ್ಮಿನಿಬರೊಳೊರ್ವನ ವರಿಸು ನಿ । ನ್ನಳಿವು ನಿಶ್ಚಯವೆನಲಂ ॥ ೧ ॥ ಪ್ರಕಟವಾಗಿದೆ ನಿನ್ನಯಂ । ಪೌರುಷ ಯಂದಂ । ನಿಕರಕಂಜಿರ್ಪೆನಯ್ಯ ॥ ಸಕಲ ಸಂಗರ ಪಲಾಯನಪಂಡಿತನು ನೀನೆಂ । ಬಯ್ಯಕಂತಿ ನಿನ್ನೊಳು ಸೇರದಂ ॥ ೨ ॥ ಪಾರ್ಥ ಸಲ್ಲನಂ ತನಗೆ । ಸಂಗರದಿ ಸ । ಮರ್ಥನಾಗಿಹ ಭೀಮಗೆ ॥ ಇತ್ತೆನಾ ಹವವಿದಂ ವ್ಯರ್ಥವಾಗಲಂ ಕಡೆ । ಗಿತ್ಯರ್ಥ ನಿಮಗೆಂದನಂ ॥ ೩ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಎಂದಾತ ನಗುತಲಿ ತರಿಸಿದ । ಗಂಧ । ಚಂದನ ಕರ್ಪೂರ ಬಹುವಿಧ ॥ ಕಂದಕಸ್ತೂರಿ ಜವ್ವಾಜಿಯು । ನಲ । ವಿಂದೇಕ್ಷಕರ್ದಮ ಭರಣಿಯ ॥ ೧ ॥ ಹರಿ ಭೀಮಪಾರ್ಥರಿಗಿಸಿತನಂ । ದಿವ್ಯಾಂ । ಬರಗಳ ಸಹಿತ ತಂದಿತ್ತನು ॥ ಪರಿಪರಿ ಯಿಂದ ತಾನೆಲ್ಲವ । ಅಲಂ । ಕರಿಸುತ ಮೆರೆದನನೇಕವ ॥ ೨ ॥ ಕೊಟ್ಟವದಿರಿಗೆ ವೀಳೆಯವನು । ಸಂ । ತುಷ್ಟಿಯೊಳ್ ಕೈಗೊಂಡು ಮಗಧನು ॥ ಅಟ್ಟಹಾಸದಿ ಭೀಮಸಹಿತಲಿ । ಜಗ । ಜಟ್ಟಿಗಳನುವಾಗಿ ರಣದಲಿ ॥ ೩ ॥

ಭಾಮಿನಿ

ಧರಣಿಪತಿ ಕೇಳ್ ಮಗಧನೃಪಮಂ । ದಿರದ ರಾಜಾಂಗಣದೊಳವನೀ । ಸುರರು ನೋಟಕರಾದರಲ್ಲಿ ಮುರಾರಿಫಲುಗುಣರು ॥ ಎರಡು ಬಲ ಮೋಹರಿಸಿ ನಿಂದುದು । ಪುರದ ಹೊರಬಾಹೆಯಲಿ ಕೃತ ಸಂ । ಚರಣ ಕಾರ್ತಿಕ ಶುದ್ಧ ಪಾಡ್ಯದೊಳಾಹವಾರಂಭ ॥ ೧ ॥

ಕಂದ

ಸಿಡಿಲಬ್ಬರಿಸುವ ವೋಲಡಿ । ಗಡಿಗೀರ್ವರಂ ಭುಜವ ಹೊಯ್ದು ಬರ ಸೆಳೆದಾಗಂ ॥ ತುಡುಕುತ ಗದೆಯೊಳು ಹೊಡೆದಾ । ಕಡುಗಲಿ ಮಾಗಧನಂ ಕಡುಗಿ ಭೀಮನೊಳೆಂದಂ ॥ ೧ ॥

ರಾಗ ಪಂಚಾಗತಿ ಮಟ್ಟೆತಾಳ

ಎಲವೊ ಭೀಮ ಗಜಸಹಸ್ರ । ಬಲನೆನುತ್ತ ಜಗದಿ ಪೇಳ್ವ । ನೆಲೆಯು ಪುಸಿಯೊ ದಿಟವೊಯೆಂದು । ತಿಳಿಯಬೇಹುದಂ ॥ ಕಲಹ ನಿನ್ನೊಳೊದಗಿತೈಸೆ। ನಿಲುವುದಾದರೆನಂತ ಹಾಯ್ದು । ಹಳಚಲೊಡನೆ ನಗುತ ಭೀಮ । ಖಳನೊಳೆಂದನು ॥ ೧ ॥ ಅಧಟುತನದೊಳೆನ್ನ ರಣದೊ । ಳೊದಗಿದವರನೆನ್ನ ಕಯ್ಯ । ಗದೆಯು ಸವಿಯ ಕಂಡು ಸುರರ । ಸದನ ಪೊಕ್ಕರು ॥ ಇದಕೊ ನಿನಗೆ ಮರಣ ಕಾಲ । ವೊದಗಿತಾಪ್ರಕಾರ ನಿನ್ನ । ಉದರ ಬಗಿದು ಭೂತವಂಶ । ದುದಧಿ

ಗೀವೆನಂ ॥ ೨ ॥ ಎಂದು ತಾವು ತವೊಳ್ಮೊಳುಸಿರಿ । ನಿಂದು ಗದೆಯ ಹೊಯಿಲ ರಭಸ । ದಿಂದ ಹೊಕ್ಕು ಹೆಣಗುತಿರ್ದ । ರಂದು ರಭಸದಿ ॥ ಮಂದರಾದ್ರಿ ಮೇರುಶೈಲ । ವೊಂದುಗೂಡುವಂತೆ ತ್ರಿಜಗ । ವೃಂದ ನಡುಗುತಿರ್ದುದಿವರ । ಮಂದಗತಿಯೊಳು ॥ ೩ ॥

ಭಾಮಿನಿ

ತೀರದಿಬ್ಬರ ಸತ್ತ್ವ ದರ್ಪದ । ಧಾರೆ ಮುರಿಯದು ಗದೆಯ ಘಾತಿಯ । ನಾರು ಬಣ್ಣಿಪರಪರಿಮಿತ ಸಂಗ್ರಾಮ ಸಾಹಸವ ॥ ಮಾರುತಿಯೆ ಮಿಗಿಲೆಂದು ಮಗಧನಿ । ಗಾರು ಸರಿಯೆಂದೆರಡುಕಡೆ ಪರಿ । ವಾರ ಪೊಗಳಲು ಮಲ್ಲಯುದ್ಧದಿ ಮರಳಿ ಹೆಣಗಿದರು ॥ ೧ ॥

ರಾಗ ಪಂತುವರಾಳಿ ಏಕತಾಳ

ಹೊಯ್ದಾಡಿದರಂ ಬಯ್ದುವರವರು ॥ ಪ ॥ ಅಡಿಗಡಿಗೀರ್ವರಂ । ಜಡಿದಬ್ಬರ ದಲಿ । ಪಿಡಿಪಿಡಿವುತ ಹಾಯ್ದು ॥ ಕಿಡಿಕಿಡಿಯಲಿ ಪ । ಲ್ಗಡಿಯುತ ಮುಷ್ಟಿಯ । ತಡೆತಡೆದತಿ ಹೊಯ್ದು ॥ ೧ ॥ ಕಿವಿಕಿವಿಯುತ ಮರು । ತಿವಿಗಳ ತಪ್ಪಿಸು । ತವಗಡಿಸುತ ಮೆಟ್ಟಿ ॥ ತವತವಗೀರ್ವರು । ಜವಗುಂದದೆ ಪೊಯ್ದ್ । ದವ ರವರಡಗಟ್ಟಿ ॥ ೨ ॥ ಮರ್ಮಂಗಳ ತಾವ್ । ತವೊಳ್ಮೊಳು ನಂಡಿದತಿ । ಶರ್ಮದಿ ಬೈದಾಡಿ ॥ ಗುಮ್ಮನೊದೆದು ಗುಂ । ಘುಮ್ಮನೆ ಗುದ್ದುತ । ಮಾರ್ಮಲೆತೊಡ ಗೂಡಿ ॥ ೩ ॥ ಸಿಡಿಲಂತೆರಗುತ । ಪೊಡವಿಗುರುಳುತೆ । ದ್ದಡಿಗಡಿಗೊದಗುತಲಿ ॥ ಕೆಡೆಕೆಡೆವುತ ಕೈ । ದುಂಡುಕುವ ಘಾತದಿ । ನಡನಡುಗಿದುದವನಿ ॥ ೪ ॥

ಭಾಮಿನಿ

ಪವನಜರ ರಾವಣರ ಘಾತದ । ಕಿವಿಗಳೋ ಚಾಣೂರಕೃಷ್ಣರ । ಬವರವೋ ಭೈರವನ ನೋಟವೊ ಶಿವನ ಹಣೆಗಣ್ಣೋ ॥ ಇವರಿರುಳುಹಗಲನ್ನಪಾನ । ವ್ಯವಹರಣೆ ಕೈಗೊಳದೆ ಕಾದಿದು । ಸವೆದು ಹದಿಮೂರ್ ದಿನದೊಳದ್ಭುತ ವಾಯ್ತು ರಣರಭಸ ॥ ೧ ॥

ರಾಗ ಭೈರವಿ ತ್ರಿವುಡೆತಾಳ

ಏನನೆಂಬೆ । ಸಾಹಸ । ವೇನನೆಂಬೆ ॥ ಪ ॥ ಭರದ ಭಾರಣೆಯಲಿ ಚತು ರ್ದಶ । ಯಿರುಳು ಮಗಧನ ಸತ್ತ್ವವು । ಮುರಿದು ಸಾಹಸ ಜರಿದು ಪಡು ವಣ । ತರಣಿಯಾಯ್ತತಿ ತೇಜವು ॥ ಬಿರಿದು ನಿದ್ರಶರೀರನಾದುದ । ನರಿತು ಮರುತಜಗಂದನಚ್ಯುತ ॥ ನೇನನೆಂಬೆ ॥ ೧ ॥ ವಾಯುವಿನ ನೀ ನೆನೆದು ದುಷ್ಟನ । ಸಾಯುಬಡಿಯೆನೆ ಶೀಘ್ರದಿ । ಆಯಸವ ಕೆಡೆಯೊದೆದು ಮಾಗಧನ । ಕಾಯುವನು ಗಗನಾಗ್ರದಿ ॥ ಪ್ರೀಯದಿಂ ಬೀಸಲ್ಕೆ ರಿಪುಜನ । ಹಾಯೆನುತ ಘೋಳಿಟ್ಟು

ದದನಿ ॥ ನ್ನೇನನೆಂಬೆ ॥ ೨ ॥ ಗಗನದಲಿ ನೂರೆಂಟು ಬಾರಿಗೆ । ತೆಗೆದು ತಿರುಗಿಸಿ ಬಿಸುಡುತ । ನಗುತ ಧರೆಗಪ್ಪಳಿಸಿ ಸೀಳಲು । ಮುಗುಳೆ ಸೀಳೊಂದಾಗುತ ॥ ಹಗರಣಕೆ ಬರೆ ಮಗಧಕಾಯುವ । ತೆಗೆತೆಗೆದು ಸೀಳುತಲಿ ಬಳಲಿದ ॥ ನೇನನೆಂಬೆ ॥ ೩ ॥ ಹಲವು ಬಾರಿಗೆ ಸೀಳಿ ದಣಿಯುತ । ಬಲಿಮಥನನನು ನೋಡಲು । ತಿಳಿದು ಕರಗಳ ತಾನು ಪಲ್ಲಟ । ಗೊಳಿಸಿ ಭೀಮಗೆ ತೋರಲು ॥ ಘಳಿಲನಬ್ಬರಿ ಸುತಲಿ ಸೀಳಲು । ತಲೆಕೆಳಗು ತಾ ಮಾಡಿ ಬಿಸುಟನು ॥ ಏನನೆಂಬೆ ॥ ೪ ॥

ಭಾಮಿನಿ

ಮರುತಸುತ ಮಗಧೇಂದ್ರನನು ಸೀ । ಳ್ದೊರಗಿಸಲು ಗೋಳಿಡುವ ಶೋಕವು। ಹರಿದು ಬಾಗಿಲನಿಕ್ಕಿತಾ ಪುರಜನಗಳಲ್ಲಲ್ಲಿ ॥ ಸರಕ ತೆಗೆದನಿತರೊಳು ಭೂಮಿಪ । ನರಸಿ ಚಿತ್ರವಿಚಿತ್ರ ಯೆನಿಪರು । ಬರುತ ನೃಪನಂಗದಲಿ ಹೊರಳಿದರಳಲಿ ಗೋಳಿಡುತ ॥ ೧ ॥

ರಾಗ ನೀಲಾಂಬರಿ ಆದಿತಾಳ

ಪ್ರಾಣನಾಯಕ ಕೇಳೆಮ್ಮಗಲಿದು । ವ್ಯರ್ಥ । ಮೌನದೊಳೊರಗಲೇ ಕುಸಿರಿದು ॥ ಕಾಣೆ ನೀನಲ್ಲದೆ ಗತಿಯನು । ಬೇಗ । ನೀನೆದ್ದು ಕರುಣಿಸು ಮತಿ ಯೇನು ॥ ೧ ॥ ಪ್ರಜೆಗಳಿಗಭಯವ ಪಾಲಿಸು । ನಿನ್ನಾ । ತ್ಮಜನನು ಜವದಿ ಸಂರಕ್ಷಿಸು ॥ ತ್ರಿಜಗಾಧಿಪತಿ ನೀನೆಂದೆನಿಸಿದೆ । ವೈರಿ । ವ್ರಜದೆದೆಯೊಳಗೇಕೆ ಮಲಗಿದೆ ॥ ೨ ॥ ಎಂತು ಬಾಳುವುದರೆಕ್ಷಣ ಬಿಟ್ಟು । ನಿನ್ನ । ಸಂತವಿಸು ನಮ ಗಭಯುವ ಕೊಟ್ಟು ॥ ಇಂತೆನುತಲಿ ಸ್ವಾಮಿಗೆಂದರು । ದೇವ । ಸಂತೋಷ ವಾಯ್ತೆಯಿನ್ನಾದರು ॥ ೩ ॥ ಮಾವ ಕಂಸಾದ್ಯರ ಮಡುಹಿ ನಿನ್ನ । ಜ್ಞನ । ಸಾವಿನೊಳಾಯಿತೆ ಸಂಪೂರ್ಣ ॥ ಈ ವಿಧಿಯೊಳಗೆಮ್ಮನಿಬರ । ಕೊಂದು । ದೇವ ನೀ ಕರುಣಿಸು ಮೋಕ್ಷವ ॥ ೪ ॥

ರಾಗ ಆನಂದಭೈರವಿ ಏಕತಾಳ

ತಂಗಿ ಕೇಳೆಮ್ಮರಸಗಿಂಥ । ಭಂಗವಾದ ಮೇಲ್ ನಾವೆಂತು । ತಾಳ್ವುದು । ಮುಂದೆ । ಬಾಳ್ವುದು ॥ ೧ ॥ ರಮಣನ ಕೂಡಗ್ನಿಗಿಂದು । ಗಮಿಸುವ ಕೃಷ್ಣನ ಮುಂದೆ । ನೋಡಲಿ । ಹರುಷ । ಮಾಡಲಿ ॥ ೨ ॥ ಹರ ಹರ ವಿಧಾತನಿಂತು । ಒರೆದನೆ ದುಷ್ಟಾತ್ಮನೆಂದು । ಬೈದರು । ಮರುಗಿ । ಸುಯ್ದರು ॥ ೩ ॥ ಮುಂದೆ ಸಹಗಮನವೆ ಲೇ । ಸೆಂದು ದುಃಖಶರಧಿಯಿಂದ । ಬಿದ್ದರು । ಗೋಳಿ । ಟ್ಟೊರಲ್ದರು ॥ ೪ ॥

ಭಾಮಿನಿ

ಎರಿಜಾಂಬಕನಮರಿಗಭಯುವ । ತೋರುತುಃಸಿರಿದನಜನ ಬರೆಹವ । ಮೀರ

ಬಲ್ಲವರಾರು ನಿನ್ನಾತ್ಮಜನಿಗೀ ಧರೆಯಂ ॥ ಚಾರುತರ ಪಟ್ಟಾಭಿಷೇಕವ । ಸೇರಿಸುವೆ ಚಿಂತಿಸದೆ ನಿನ್ನ ಕು । ಮಾರನೊಡನಿಹಂದೆಂದು ಸಂತೈಸಿದನು ಹರಿ ದಯದಿ॥

ಕಂದ

ಪ್ರಜೆಗಳು ಭಯದಿಂದೋಡುವ । ಗಜಬಜವನಂ ಕಾಣುತೊಡನೆ ಕಾರುಣ್ಯದೊಳಂ ॥ ನಿಜ ಹಸ್ತವ ತೋರಿಸುತಂ । ದಜಪಿತನಿಂತೊರದನವರೊಳತಿ ತವಕದೊಳಂ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಪರಿವಾರ ಪುರಜನವಂಜದಿರಂಜದಿ । ರರಸನಿಂದತಿಶಯದಿ ॥ ಕರುಣಿಸಿ ನಡೆಸುವೆವೆಂದು ಭೀಮಾರ್ಜುನ । ರೊರೆದಭಯಂವಿದೆನಲು ॥ ೧ ॥ ಆ ಸಮಯದಿ ದೈತ್ಯಸುತ ನಡೆತರುತತಿ । ಕ್ಲೇಶದೊಳೆರಗೆ ಕಂಡು ॥ ತಾ ಸಹದೇವನ ತೆಗೆದಪ್ಪಿ ರಾಜಸಿಂ । ಹಾಸನವನುಯೇರಿಸಿ ॥ ೨ ॥ ಪಟ್ಟಾಭಿಷೇಕವ ರಚಿಸಲು ಕಾಣಿಕೆ । ಗೊಟ್ಟೆಲ್ಲರೊದಗೆ ಮತ್ತೆ ॥ ಕೃಷ್ಣ ತಾನೈದಿದು ಸೆರೆಯಿಂದ ಬಿಡಿಸಿದ । ಸೃಷ್ಟಿ ಪಾಲಕರನೆಲ್ಲ ॥ ೩ ॥ ಆ ನೃಪಾಲರು ಕೈಯ ಮುಗಿದು ನಮ್ಮಿಂದ ಮುಂ । ದೇನಾಗಬೇಕೆನಲು ॥ ಕ್ಷೋಣಿಪಾಲನ ಯಜ್ಞಕನುಕೂಲರಾಗೆಂದು । ತಾ ನೇಮಿಸುತ ಕಳುಹಿ ॥ ೪ ॥ ಮಗಧಕಂವರನುಪಚಾರವ ಕೈಗೊಂಡು । ನಗುತ-ಭಯವ ಪಾಲಿಸಿ ॥ ಬಗೆ ಬಗೆ ಕಪ್ಪಕಾಣಿಕೆಯಾನೆ ಕುದುರೆ ಸೈ । ನ್ಯಗಳಿಂದ ಪೊರಮಟ್ಟರು ॥ ೫ ॥

ವಾರ್ಧಿಕ

ಅರಸ ಕೇಳಖಿಳ ಭೂವರರನಿಂತಚ್ಯುತಂ । ಕರುಣದಿಂ ಬೀಳ್ಕೊಟ್ಟು ಮಗಧ ಸುತಗಿತ್ತಖಿಳ । ಧರೆಯುನಲ್ಲಿಂದ ಪರಿಪರಿಯ ಕಪ್ಪವ ಕೊಂಡು ಪೊರಮಟ್ಟು ನಿಜನಗರಿಗೆ ॥ ಹರಿಭೀಮಪಾರ್ಥರಯ್ತ್ತರಲಿದಿರ್ಗೊಂಬಖಿಳ । ತರುಣಿಯರ ಮಂಗಳಾರತಿಯ ಕೈಗೊಂಡು ನೃಪ । ನರಮನೆಯ ಪೊಗಲು ಜನವೆರಸಿ ನಮಿಸಿದ ಧೊರೆಯಂ ಹರಿಯುಪ್ಪತಿಂತೆಂದನಂ ॥ ೧ ॥

ರಾಗ ಸಾರಂಗ ಅಷ್ಟತಾಳ

ಧರ್ಮಜ ಕೇಳೆನ್ನ ಮಾತ । ಖಳ । ನಿರ್ಮೂಲನಾಶನವಿನಿತ ॥ ಶರ್ಮದಿ ಸಕಲ ಭೂಪರ ಗರ್ವವಿಳುಹಿದ । ದುರ್ಮತಿಯುಳಿದಮೇಲಿದಿರ್ಯಾರು ನಮಗಿನ್ನು ॥ ೧ ॥ ನಿನ್ನಯಜ್ಞಸ್ಥಳಕೆ ಬಾಧಕರ । ಕಾಣೆ । ನನ್ಯರನವನಿಪಾಲಕರ ॥ ಇನ್ನೇನು ದೀಕ್ಷೆ ಕೈಗೊಳು ದಿವ್ಯ ಋಷಿಗಳ । ಮಾನ್ಯರ ಬರಿಸು ನಿನ್ನಿಷ್ಟ ಕೈಸಾರ್ದುದು ॥ ೨ ॥ ಕರೆಸು ಮಂತ್ರಿಗಳ ಬೇಗಿನ್ನು । ಎನ್ನ । ಕರೆಸಿದರಾಕ್ಷಣ ಬಹೆನು ॥ ಅರಸ ತಾನಯ್ದುವೆ ದ್ವಾರಕೆಗೆನುತ್ತ । ಲರುಹಿ ಮಾಗಧನ ತೇರಿನೊಳೇರಿ ಪೊರಟನು ॥ ೩ ॥

ಭಾಮಿನಿ

ಹರಿಯು ಬೀಳ್ಕೊಂಡೆಮಜ ಚಿಂತಾ । ಶರಧಿಯೊಳಗಾಲೋಚಿಸುತ ಮುನಿ । ಯರುಹಲೆತ್ತಿದನೇಕೆ ತೊಡಗಿದೆ ಸಕಲ ದಿಗ್ವಿಜಯಂ ॥ ದೊರಕದಿದು ಪರಿಹಾಸ ವಾಯಿತಂ । ಸುರಸಭೆಗೆ ನಗೆಯಾಯ್ತು ಕೌರವ । ರರಿದು ಕೈ ಚಪ್ಪಳಿಸಿ ನಗು ವಂತಾದುದಕಟೆಂದ ॥ ೧ ॥

ಕಂದ

ಇಂತೆನುತಂತಕಸುತನತಿ । ಚಿಂತಿಸುತಿರಲಾಗ ತಿಳಿದು ಫಲಗುಣ ಭರದಿಂ ॥ ನಿಂತಾರ್ಭಟಿಸುತ ಪ್ರಳಯಕ್ರ । ತಾಂತನ ತೆರದಿಂದ ಗರ್ಜಿಸುತಲಿಂತೊರೆದಂ ॥

ರಾಗ ಮಾರವಿ ಏಕತಾಳ

ಕ್ಲೇಶಗಳೇನಿದು ಬಿಡು ಬಿಡು ಶಿವ ಪರಿ । ಹಾಸವೆ ಭೂಮಿಯೊಳು ॥ ವಾಸವ ನೋಲಗ ನಗುವುದೆ ತನ್ನ ಮಂ । ಹಾ ಶೌರ್ಯಗಳಿರಲು ॥ ೧ ॥ ಸಪ್ತಾಂಬು ಧಿಯ ನೃಪಾಲರ ಗೆಲಿದೀ । ಗರ್ಥವನೊಪ್ಪಿಸುವೆ ॥ ಇತ್ತಿಹ ಮಾತಿಗೆ ಪುಸಿ ಯಾದರೆ ಪುರು । ಷೋತ್ತಮಪದದಾಣೆ ॥ ೨ ॥ ಗಾಂಡೀವಾದಿ ಶರೌಘವಿರಲು ಭೂ । ಮಂಡಲ ಜಯಿಸುವರೆ ॥ ಕಂಡುದೆ ಸಂಶಯ ತಾ ವೀಳ್ಯವನಿನಿ । ತಂಡಲೆಯುದಿರೆನಲು ॥ ೩ ॥

ರಾಗ ಸಾಂಗತ್ಯ ರೂಪಕತಾಳ

ಆ ಸಮಯಂದಿ ವೇದವ್ಯಾಸ ಧೌಮ್ಯರು ಬರ । ಲಾ ಸಭೆ ಸಹಿತಿದಿಗೊಂಡು ॥ ಆಸನವಿತ್ತು ಪೂಜಿಸುತಡಗೆಡೆಯ ಸಂ । ತೋಷದಿ ತೆಗೆದಪ್ಪುತೆಂದ ॥೧॥ ಕ್ರತುವ ಕೈಗೊಂಡ ಸಂಗತಿ ಕೇಳ್ದು ಬಂದೆ ಕೇ । ಳತಿಶಯವಾಯ್ತು ತಪ್ಪೇನು ॥ ಅತಿಬಲ ರಿವರು ಜಯಿಸಲಿ ಭೂತಳವನು ದೀ । ಕ್ಷಿತನಾಗು ತಡಮಾಡದೆನಲು ॥ ೨ ॥ ಪಾರ್ಥನುತ್ತರದೆಸೆಗಾಗಿ ಪೂರ್ವಕೆ ವಾಯುಂ । ಪುತ್ರನಯ್ದಲಿ ತೆಂಕುದೆಸೆಗೆ ॥ ಮಂತ್ರೆಮ್ಮ ಸಹದೇವ ನಕುಲ ಪಶ್ಚಿಮಕೆಂದು । ಪ್ರತ್ಯೇಕ ವಿಂಗಡಿಸಿದರು ॥ ೩ ॥ ನಾಲ್ಕು ದಿಕ್ಕಿಗೆ ನಾಲ್ವರೆಂದು ವೀಳ್ಯವ ಕಯ್ಗೊಂ । ಡಾ ಕೃಪಾನಿಧಿಗಳಿಗೆರಗಿ ॥ ಲೌಕಿಕ ಶುಭಮುಹೂರ್ತದಿ ಮಂತ್ರಾಕ್ಷತೆಯಿಂದ । ನೇಕ ಸೈನಿಕ ಸಹ ಪೊರಟು ॥

ವಾರ್ಧಿಕ

ಪೃಥ್ವೀಶ ಕೇಳಖಿಳ ವಾದ್ಯಘೋಷದಿ ನಡೆದು । ಪಾರ್ಥನುತ್ತರದೆಸೆಯ ನೃಪರ ಜಯಿಸುತ ಬರಲಿ । ಕಿತ್ತ ಪ್ರಾಗ್ಜ್ಯೋತಿಷಕೆ ಧಾಳಿಟ್ಟನಲ್ಲಿ ಜೀನಕರ ಬೋಟಕರೆನಿಸುವ ॥ ದೈತ್ಯಮಂತ್ರಿಗಳ ಸಂಕುಲವೆರಸಿ ಮೆರೆವ ಭಗ । ದತ್ತನವ ನಿಯು ನರನ ಪಡೆಯುಯ್ದಿ ಮಂಸುಕಲೀ । ವೃತ್ತಾಂತವೆಲ್ಲಮಂ ಜೀನಬೋಟಕ ರಯ್ದು ನರಕಾತ್ಮಜನೊಳೆಂದರು ॥ ೧ ॥

ರಾಗ ಮುಖಾರಿ ಅಷ್ಟತಾಳ

ಜೀಯ ಕೇಳೆಮ್ಮ ಜನರಿಗಿಂದವುತಣ । ವಾಯಿತಿಕೊ ಸಂಪೂರ್ಣ ಮನುಜನಿ। ಕಾಯ ಬಂತೆಮ್ಮವನಿಗೆ ॥ ೧ ॥ ಮರ್ತ್ಯವಾಂಸವ ಮೆಲದೆ ಈ ಜನ್ಮವು । ವ್ಯರ್ಥವೆನ್ನದಿರಪರಿಮಿತವದೆ । ಕೃತ್ತಿವಾಸನ ಕರುಣದಿ ॥ ೨ ॥ ಮಾಂಸದಿಂದಲೆ ಶಾಕಪಾಕಂಗಳ । ಹಿಂಸೆಯಿಂದಲಿ ಮಾಡಿ ನಮ್ಮಯ । ವಂಶವೆಲ್ಲವನುಣಿಸುವ ॥

ರಾಗ ಕಾಂಭೋಜಿ ಝಂಪೆತಾಳ

ಇಂತೆನಲು ಕೇಳ್ದಸುರ ತನ್ನ ಭೂಮಿಯೊಳು ನರ । ಜಂತುಗಳ ಕಾಣೆನೀ ವರೆಗೆ ॥ ಅಂತಕಾಂತಕನಿಲ್ಲಿ ಬರಲಂಜುವನು ನರರಿ । ದೆಂತಪರಿಮಿತ ಬಂದು ದಯ್ಸೆ ॥ ೧ ॥ ಮರಣವನು ನಿಶ್ಚಯಿಸಿ ಬಂದವರ ತಡೆಗಡಿದು । ಪರಿವಾರ ಕುಣಬಡಿಸಲಿಂದು ॥ ಪೊರಡಲೆಮ್ಮಖಿಳ ಬಲವೆಂದು ಗರ್ಜಿಸಲೊಡನೆ । ನೆರೆದು ದೇನೆಂಬೆ ಖಳನಿಕರ ॥ ೨ ॥ ಜೀನ ಬೋಟಕರುಗಳ ಸೇನೆಸಹಿತಸುರಪತಿ । ತಾನೆ ಪೊರಟರ್ಜುನನ ಪಡೆಯ ॥ ಹಾನಿಗೆಯ್ದೆಚ್ಚಾಡಲಸುರರಿದಿರೊಳು ನಿಲುವ । ಜಾಣರಿಲ್ಲಾ ನರನ ಬಲದಿ ॥ ೩ ॥ ಕಂಡು ಫಲುಗುಣ ರೋಷಗೊಂಡು ನಿಜ ಚಾಪದೊಳು । ಕೆಂಡದಂತಸ್ತ್ರಗಳನೆಚ್ಚು ॥ ಹಿಂಡು ಖಳಕುಲವ ತೆಗೆದೋಡಿ ಸಲು ಭಗದತ್ತ । ಗಾಂಡೀವಿಯೊಡನೆಂದ ಮುಳಿದು ॥ ೪ ॥

ರಾಗ ಶಂಕರಾಭರಣ ಮಟ್ಟೆತಾಳ

ಎಲವೊ ಮನುಜಯೇನು ಧೈರ್ಯದಿಂದ ನಿನ್ನಯ । ಬಲಸಮಗ್ರ ಸಹಿತ ಬಂದೆ ಪೇಳು ತನ್ನಯ ॥ ಬಲುಹ ನೀನು ತಿಳಿಯಂದಕಟ ಕೆಟ್ಟೆ ನಿನ್ನನು । ಸಲಹು ವಾತನಾರೆನಲ್ಕೆ ಮುಳಿದು ಪಾರ್ಥನು ॥ ೧ ॥ ಧಿಟ್ಟತನಗಳಾಡಿ ಸಾಯಬೇಡ ಕಪ್ಪವ । ಕೊಟ್ಟು ಸೈನ್ಯಸಹಿತಲೊದಗು ರಣಸಹಾಯವ ॥ ಧೃಷ್ಟ ದನುಜ ನಿನಗೆ ಬದುಕುವಾಸೆಯಿರ್ದಡೆ । ಜ್ಯೇಷ್ಠನಾದ ಧರ್ಮಸುತನ ಚರಣ ಸಾರ್ದಡೆ ॥ ೨ ॥ ಸಲಹಿಕೊಂಬನಲ್ಲದಿರಲು ತಲೆಯ ಕೊಂಬೆನು । ತಿಳಿಯೆನುತ್ತ ಬಾಣ ಬಿಡಲು ತರಿವುತೆಂದನು ॥ ಬಲವಿರೋಧಿಗಳನು ಬಗೆವನಲ್ಲ ಮರ್ತ್ಯರ । ಬಲುಹಿ ಗಂಜೆನೆಲವೊ ನಿನ್ನ ಪಡೆ ಸಮಸ್ತರ ॥ ೩ ॥ ಅಸುರಕುಲಕೆ ಹಬ್ಬವೆನಿಸದುಳಿಯೆ ನೆನ್ನುತಾ । ವಿಷಮ ಶರಳ ಸುರಿಯೆ ತರಿದು ಪಾರ್ಥ ಗಜರುತ ॥ ದೆಸೆಗಳಾವು ದವನಿಯಾವುದೆನಲು ಬಾಣದಿ । ಮುಸುಕಲಿಂತು ಸಮರವೆಸೆದುದತಿ ವಿಚಿತ್ರದಿ ॥

ಭಾಮಿನಿ

ಕಾದಿದರು ಬೇಸರದೆ ಹಗಲಿರು । ಳಾದುದಾಹವವೆಂಟು ದಿನ ರಣ । ವಯ್ದುತಿರೆ ಭಗದತ್ತ ಮೆಚ್ಚಿದನರ್ಜುನನ ಹತಿಗೆ ॥ ಈ ಧರಿತ್ರಿಯೊಳಿನಿತು

ಕಾದುವ । ಕೈದುಗಾರರ ಕಾಣೆ ನರನ । ಲ್ಲಾದಿಶಿವನಿವನೆಂದು ಪೊಗಳಂತ ಲೆಂದ ನರ್ಜುನಗೆ ॥ ೧ ॥

ರಾಗ ಭೈರವಿ ಝಂಪೆತಾಳ

ಧೀರ ತೆಗೆ ಮೆಚ್ಚಿದೆನು । ಭೂರಿ ಭುಜಬಲನರರೊ । ಈ ರೀತಿ ಕಾಣೆ ನೀ । ನಾರು ಪೇಳೆನಲು ॥ ೧ ॥ ದೇವೇಂದ್ರಸುತ ಪಾರ್ಥ । ರಾವೆನಲು ನಸುನಗುತ । ನಾವು ನಿಮ್ಮಯ್ಯನಿಗೆ । ಜೀವಸಖರೈಸೆ ॥ ೨ ॥ ಅದರಿಂದಲಾಪ್ತನೆನು । ತಿದಿರು ಗೊಂಡುಪಚರಿಸ । ಲದಕೇನು ಸ್ನೇಹಿತರೆೊ । ಳಧಿಕ ನೀನಹುದು ॥ ೩ ॥ ಧರ್ಮಜಾಧ್ವರಕೆ ನೀವ್ । ನಿಮ್ಮಾಪ್ತಜನಸಹಿತ । ನಮ್ಮಲ್ಲಿ ಬಂದದರ । ನಡೆಸಿಕೊಡಿರೆನಲು ॥ ೪ ॥

ಭಾಮಿನಿ

ಚಂದವೈ ಸಲೆಯೆಂನಂತ ತನ್ನ । ಲ್ಲಿಂದ ಕೊಟ್ಟನು ಸಕಲ ವಸ್ತುವ । ಮಂದಿ ಗಜರಥ ವಾಜಿಗಳನತಿ ಚಿತ್ರಭಾವದಲಿ ॥ ಒಂದು ತಿಂಗಳು ಹೀವು ಮನ್ನಣೆ । ಯಿಂದ ಮನ್ನಿಸಿ ತನ್ನ ಸೇನಾ । ವೃಂದವನು ಕಳುಹಿದನು ಬಳಿಯಲಿ ನರನ ಸತ್ಕರಿಸಿ ॥ ೧ ॥

ವಾರ್ಧಿಕ

ಬಳಿಕ ನರ ನಡೆದಯ್ದಿ ಬಡಗಣ ನೃಪಾಲರಂ । ಗೆಲಿದಖಿಳ ವಸ್ತುಗಳ ಕೊಂಡು ಪುರಕಯ್ದಲ್ಕೆ । ಕಲಿ ವೃಕೋದರ ಮೂಡಣರಸುಗಳ ಗೆಲಿದಖಿಳ ವಸ್ತು ಭಂಡಾರ ಸಹಿತ ॥ ನಿಳಯ ಕಯ್ತಂರಲಿತ್ತ ಸೇತುಪರ್ಯಂತ ನಡೆ । ದುಲಿವ ಭಟರಂ ಗೆಲ್ದು ಲಂಕೆಗೆ ಘಟೋತ್ಕಚನ । ಕಳುಹುತಲ್ಲಿಂದಖಿಳ ವಸ್ತು ಸಹಿತಣ್ಣನಂ ಕಂಡನಾ ಸಹದೇವನು ॥ ೧ ॥ ನಕುಲ ಪಶ್ಚಿಮದಿಂದ ಸಕಲವಸ್ತುವ ತರಲು । ಪ್ರಕಟವಾಯ್ತೆಂಜನಾಜ್ಞೆಯ ವೀರ್ವರಿಲ್ಲ ನಾ । ಲಕು ಶರಧಿ ಮಧ್ಯದೊಳಗೆಂದು ಮಂಜಗ ಪೊಗಳಲಿತ್ತಲಿಂದ್ರಪ್ರಸ್ಥದಿ ॥ ಸಕಲಸನ್ನಾಹ ಮೆರೆಯಲ್ಕೆ ಧೌಮ್ಯಾದಿಗಳ್ । ಭಕುತವತ್ಸಲನ ಕರೆಸೆನೆ ಕೇಳ್ದು ಪಾರ್ಥ ದ್ವಾ । ರಕೆಗಯ್ದಿ ಶ್ರೀಹರಿಯ ಚರಣಾರವಿಂದಮಂ ಕಂಡೆರಗುತಿಂತೆಂದನು ॥ ೨ ॥

ರಾಗ ಸುರುಟಿ ಏಕತಾಳ

ಕೇಳೆನ್ನ ಬಿನ್ನಪವ । ಕರು । ಣಾಳು ದೇವರ ದೇವ ॥ ಕೇಳೆನ್ನ ॥ ಪ ॥ ನಿನ್ನಾಜ್ಞೆಯೊಳು ನಡೆದು । ಚತು । ರಾರ್ಣವನೆಲ್ಲವ ಗೆಲಿದು ॥ ಉನ್ನತವಹ ಕ್ರತು । ಸನ್ನಾಹಗಳೆ । ಮ್ಮಣ್ಣಗೆ ಸೇರಿದು । ದಿನ್ನೇನಪ್ಪಣೆ ॥ ಕೇಳೆನ್ನ ॥ ೧ ॥ ನಡೆದೆಮ್ಮಾಧ್ವರವಿವರ । ಸರಿ । ನಡೆಸಿ ರಕ್ಷಿಪ ಭಾರ ॥ ಒಡೆಯ ನಿನಗೆ ಸಲೆ । ಬಿಡದಯ್ಯನ ಸೇರ । ಗಡಣದಿ ಮೆರೆಸೆನು । ತಡಿಗಳಿಗೆರಗಿದ ॥ ಕೇಳೆನ್ನ ॥ ೨ ॥

ಕಿರುನಗೆಯಿಂದಲಿ ತಾನು । ತೆಗೆ । ದೊರಸಿ ಕಂಬನಿಗಳನಂ ॥ ಮರುಗದಿರೊಡನೈ ತರುವೆನು ನಿನ್ನ । ಧ್ವರವನು ರಕ್ಷಿಸ । ದಿರೆನೆಂದಪ್ಪಿದ ॥ ಕೇಳಿನ್ನ ॥ ೩ ॥

ಭಾಮಿನಿ

ಕರೆಸಿ ಯಾದವನಾಯಕರ ಸಂ । ವರಣೆಯನು ನಿಜಪುರದ ಕಾಹಿಂ । ಗಿರಿಸಿ ವಸುದೇವಂಗೆ ನೇಮಿಸಿ ಸಕಲ ಲಕ್ಷಣವ ॥ ತರಿಸಿ ಭಂಡಾರವನು ವಿವಿಧಾ । ಭರಣ ರತ್ನಾವಳಿಯನೇರಿಸಿ । ಹರಿ ಧನಂಜಯನೊಡನೆ ಬಂದನು ಬಂಧುಜನಸಹಿತ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ವನಜಾಕ್ಷನಿಂತಯ್ತರೆ ಕಂಡು । ಬಂಧು । ಜನಸಹಿತರಸನಿದಿರ್ಗೊಂಡಂ ॥ ಚಿನುಮಯನಂಘ್ರಿಯೊಳೆರಗಲು । ತೆಗೆ । ದನಿಬರ ಪಿಡಿದಂ ತಕ್ಕಯಿಸಲು ॥ ॥ ೧ ॥ ಕರೆತಂದು ಸಿಂಹಾಸನದೊಳು । ಉಪ । ಚರಿಸಲು ಧೌಮ್ಯಾದಿ ಮುನಿಗಳು ॥ ಚರಣಕೆ ನಮಿಸಲು ಮನ್ನಿಸಿ । ಸಚಿ । ವರು ಸಹಿತೆಲ್ಲರಾಲೋಚಿಸಿ ॥ ॥ ೨ ॥ ಋಷಿಗಳ ಕರೆಸಿ ವಸಿಷ್ಠರ । ತಾ ನೇ । ಮಿಸುತಲಿ ನೃಪಮಂಡಳೀಕರ ॥ ಉಸಿರಲೆಂದುಡುಗೊರೆ ಸಹಿತಲಿ । ಓಲೆ । ಪಸರಿಸಿತಖಿಳ ದೇಶಗಳಲಿ ॥ ೩ ॥

ಭಾಮಿನಿ

ನಕುಲನನು ಕರೆದೆಂದ ನೀ ಪೋ । ಗಖಿಳ ಧೃತರಾಷ್ಟ್ರಾದಿ ಗುರು ಭೀ । ಷ್ಮ ಕರುಗಳನಿದ ನಡೆಸಿಕೊಡಿರೆಂದರುಹಿ ಬಾರೆನಲು ॥ ಸಕಲ ಉಡುಗೊರೆ ಸಹಿತ ಪಯಣದೊ । ಳಕುಟಿಲನು ನಡೆತಂದು ಬಹು ಕಾ । ಣಿಕೆ ಸಹಿತ ಪದಕೆರಗಲೆತ್ತುತಲೆಂದನಂಧನೃಪ ॥ ೧ ॥

ರಾಗ ನೀಲಾಂಬರಿ ಝಂಪೆತಾಳ

ಏನು ಬಂದ್ಯೆ ನಕುಲ ನೀನು । ಧರ್ಮಸುತ । ತಾನಟ್ಟಿದಂದೊಸ್ವಕಾರ್ಯವೊ ಪೇಳು ನೀನು ॥ ಏನು ॥ ಪ ॥ ಕ್ಷೇಮವೇ ಕೌಂತೇಯರಿಂಗೆ । ಪ್ರಜೆಗೆ ಪರಿ । ಣಾಮವೇ ನಳಿನಾಕ್ಷಿ ದ್ರುಪದನಂದನೆಗೆ ॥ ತಾ ಮನದೊಳೀನ ನೆನೆದಿಹನು । ಹರಿ ನಿಮಗೆ । ಪ್ರೇಮಿಯಾಗಿಹನೆ ಪೇಳೆನಲೆಂದನವನು ॥ ಏನು ॥ ೧ ॥ ಜೀಯ ಕೇಳನಿಬರಿಗೆ ಕ್ಷೇಮ । ನೃಪರಾಜ । ಸೂಯಾಧ್ವರವನು ಕೈಗೊಂಡ ನೀವ್ ನಿಮ್ಮ ॥ ಆಯತಾಕ್ಷಿಯರು ಸಹಿತಲ್ಲಿ । ಬಂದದರ । ಪ್ರೀಯದಿಂ ನಡೆಸಿಕೊಡಬೇಕು ದಯದಲ್ಲಿ ॥ ಏನು ॥ ೨ ॥ ಎನ್ನನಟ್ಟಿದ ನಿಮ್ಮನೆಲ್ಲ । ಕರೆತರಲು । ಚಿನ್ಮಯಾತ್ಮಕನ ಕೃಪೆಗೇನು ಕುಂದಿಲ್ಲ ॥ ಇನ್ನಿದರ ನಡೆಸಿಕೊಡಿರೆಂದು । ಪದಕೆರಗೆ । ತನ್ನರಸಿಯೊಳು ಪೇಳ್ದನಂಧನೃಪನಂದು ॥ ಏನು ॥ ೩ ॥ ವಿರಚಿಸುವ ಯಮಜ ಯಜ್ಞವನು । ಅದಕೆಮ್ಮ । ಕರೆಯಬಂದಿಹನೀಗ ನಕುಲ ತಾನಿವನು॥

ಪೊರಡಬೇಕಿನ್ನು ನೀ ಸಹಿತ । ನಿನ್ನ ಮನ । ದಿರವ ಪೇಳೆನಲೆಂದಳತಿಶಯಂದ ಮಾತ ॥ ಏನಂ ॥ ೪ ॥

ರಾಗ ಸಾಂಗತ್ಯ ರೂಪಕತಾಳ

ಕಂಡವರಿಗೆ ಜನಿಸಿದ ಸುತರಿನಿತು ಕೈ । ಗೊಂಡರೀಪರಿ ಯಜ್ಞದಿಂದ ॥ ಪಾಂಡುವಿಗುಂಟೆ ಸದ್ಗತಿ ಪರಿಹಾಸ ಭೂ । ಮಂಡಲದೊಳಗಾದುದಲ್ಲೈ ॥ ೧ ॥ ಎಂತಾದಡೆಮಗೇನು ಪೋಗುವುದವದಿರ । ಭ್ರಾಂತುತನವ ಕಾಣಲೈಸೆ ॥ ಅಂತರ ವರಿಯದೆ ಲೋಕವೀಪರಿಗಳಂ । ಕುಂತಿಗೆ ಸೊಗಸೆಂದಳಾಗ ॥ ೨ ॥ ದುಗುಂಡದಿ ಬೀಳ್ಕೊಂಡು ನಕುಲನು ಗುರುಭೀಷ್ಮ । ರುಗಳ ಪೇಳ್ದನು ಯಾಗಕೆಂದು ॥ ಮುಗಿದು ಕೈಗಳನಂದು ಕೃಪವಿದುರಾದ್ಯರ । ಬಗೆಬಗೆಯಿಂದ ಪೇಳಿದನು ॥ ೩ ॥ ಶಕುನಿ ಸೈಂಧವ ಕರ್ಣಾದಿಗಳೆಸೆದಿಹ ಭೂಪಾ । ಲಕನೋಲಗಕೆ ಬರುತಂದು ॥ ಭಕುತಿಯಿಂದಣ್ಣಗೊಂದಿಸೆ ತೆಗೆದಪ್ಪಿ ಸ । ಮ್ಮುಖದಿ ಕುಳ್ಳಿರಿಸುತಿಂತೆಂದ ॥ ೪ ॥

ರಾಗ ಮಧುಮಾಧವಿ ಆದಿತಾಳ

ತಮ್ಮ ನೀನೇನು ಬಂದಿಹೆ ಸತಿಗಾಗಿ । ನಿಮ್ಮೊಳು ಜಗಳ ಬಂದೀರೀತಿಯಾಗಿ ॥ ಧರ್ಮಜಾದ್ಯರು ನೂಕಿಸಲ್ಕೆ ಬಂದಿರವೋ । ನಮ್ಮಿಂದಲದಕನುಕೂಲ ಕಾರಿಯುವೊ ॥ ೧ ॥ ನಿನ್ನ ಯಾರಿಗೆ ಸತಿಯೆಂಬುದ ಪೇಳು । ಎನ್ನೊಳೆಂದೆನೆ ನಾಚುತೆಂದನಾತನೊಳು ॥ ಸಣ್ಣವನೊಡನಿಂತ ಸರಸವೇಕಣ್ಣ । ಎನ್ನನಟ್ಟಿದುದ ಪೇಳ್ವೆನು ಕೇಳ್ ಪ್ರಸನ್ನ ॥ ೨ ॥ ರಾಜಾಧ್ವರವನು ಕೈಗೊಂಡನೆಮ್ಮಣ್ಣ । ರಾಜಾಧಿಪತಿಗಳು ಸಹವಾಗಿ ನಿನ್ನ ॥ ಸ್ತ್ರೀಜನರನುಜರು ಸಹಿತಯ್ದೆ ಬಂದು । ರಾಜೇಂದ್ರಕ್ರತುವ ನೀ ನಡೆಸುವುದೆಂದು ॥ ೩ ॥ ನಿಮ್ಮೆಲ್ಲರನು ಹೇಳಿ ಬರಲಟ್ಟಿದುದಕೆ । ನಮ್ಮೊಳೀಪರಿಗಳ ನೀನಾಡಿದುದಕೆ ॥ ಒಮ್ಮೆಗೆ ತಾನು ಸೈರಿಸಿದೆನೆಂದೆನಲು । ತಮ್ಮವರನು ನೋಡುತೆಂದ ಹಾಸ್ಯದೊಳು ॥ ೪ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ನೋಡಿ ಸೀವಿವರೈವರೊಬ್ಬಳ । ಕೂಡುತಿಲ್ಲದ ಕೃತ್ಯಗಳ ತಾವ್ । ಮಾಡುತೆಮ್ಮೊಡನೀಪರಿಯು ಮಾ । ತಾಡುವರಲ್ಲೈ ॥ ೧ ॥ ಕಾಡಿನಲಿ ಜನಿಸಿರುವದೆಲ್ಲವ । ನೋಡದಯ್ಯಂಗಮರಪದವಿಯು । ಮಾಡುವರಲ್ಲೈ ನಗೆಗೆಡೆಯು ಜಗ । ವಾಡುವಂತೆ ॥ ೨ ॥ ಚೋರಗೋವಳಹುಡುಗನವರೊಳು । ಸೇರಿರುವ ಲೇಸಾಕ್ರತುಂವಕ । ಣ್ಣಾರೆ ಕಾಂಬೆವೆನಲ್ಕೆ ನುಡಿದನು । ದಾರ ಕರ್ಣ ॥ ೩ ॥ ದಾಯಭಾಗವನಿತ್ತು ರಿಪುಕೌಂ । ತೇಯರನು ಹೆಚ್ಚಿಸಿದ ಮೇಲರಿ । ರಾಯರತಿ ಬಲರಾದರವರೊಳು । ಪಾಯವಿಲ್ಲ ॥ ೪ ॥ ಆದರೆಯು ನಾಳಿನಲಿ ರಿಪುಗಳ । ಹೊಯೆ ಮಜನಧ್ವರವ ಕೆಡಿಸದೆ । ಹೋದೆನಾದರೆ ಕರ್ಣನಲ್ಲೆಂ । ದಾಧರಿಸಿದ ॥ ೫ ॥

ವಾರ್ಧಿಕ

ಕಲಿಕರ್ಣನೀತೆಂದು ನೃಪನ ಸಂತವಿಸಿಲ್ಕೆ । ಬಳಿಕ ಪಯಣದಮೇಲೆ ಕಲಿ ನಕಂಲ ನಡೆದೆಮಜ । ನಿಳಯುಮಂ ಪೊಗುತಿನಿತ ತಿಳುಹಿ ಚೀತಿಸಲಾತನನುಜನಂ ಸಂತಯಿಸಲು ॥ ಜಲಜಾಕ್ಷನಿತ್ತ ನೃಪನಗರಮಂ ಶೃಂಗರಿಸ । ಲಲಘುಮತಿ ಮಯವಿಶ್ವಕರ್ಮರಿಂಗೋಲಿಯಂ । ಕಳುಹಲವರವರಕಡೆ ಶಿಲ್ಪಿಗರು ಸಹಿತಯಿ ಬಲಿಮಥನಗಿಂತೆಂದರು ॥ ೧ ॥

ರಾಗ ಘರಜು ಏಕತಾಳ

ಕೈಕೊಳುವುದೆಮ್ಮ ಸೇವೆಯ । ಶ್ರೀಕೃಷ್ಣರಾಯ । ಕೈಕೊಳುವುದೆಮ್ಮ ಸೇವೆಯ ॥ ಪ ॥ ಕೋಟಿಮಂದಿ ನಮ್ಮಾವೈದೆ । ಕೋಟೆಕೊತ್ತಳಗಳ ಮುಂದೆ । ಘಾಟುಘಾಟನಿಂದ ಶೃಂಗಾರ । ಮಾಳ್ಪೆವಾನಂತ । ಕೋಟಿಸೂರ್ಯಪ್ರಭೆಯ ವಿಸ್ತಾರ ॥ ಮಾಳ್ಪೆವು ಜೀಯ ॥ ೧ ॥ ಸಂಮುಗೊಂದಿಯಂದಚಂದ । ದಿಂದಮಾಡಿ ಬಂದ ಮಂದಿ । ಮಂದಿ ಮಂದೆಗೊಂದೊಂದರಮನೇ । ಮಾಳ್ಪೆವಿಂದೆಮ್ಮ । ತಂದೆ ಕಂಡು ಮನ್ನಿಸೆಮ್ಮನೆ ॥ ಶ್ರೀಕೃಷ್ಣರಾಯ ॥ ೨ ॥ ಸುತ್ತಮುತ್ತ ಮುತ್ತು ರತ್ನ । ಪೊತ್ತಸ್ವರ್ಣಭಿತ್ತಿಯುಮರ । ವಸ್ತುವಡವೆ ವಿಸ್ತಾರಂಗಳ । ಚಿತ್ರಿಸುವೆವೆಲ್ಲ । ನಿತ್ತು ನೋಡು ವಿಸ್ಮಯಂಗಳ ॥ ಶ್ರೀಕೃಷ್ಣರಾಯ ॥ ೩ ॥ ಇಕ್ಕೊ ಕೆಲಸ ನೂತನಂಗಳ್ । ಚೊಕ್ಕವಾಗಿ ಕಂಡಮೇಲೆ । ಅಕ್ಕರದಿ ಕಿಂಕರರಿಗುಡುಗೊರೆ । ಪಾಲಿಸು ನಿಮ್ಮಾ । ದಕ್ಕೆ ಬೀಳ್ವೆ ಕರುಣಿಸೆಮ್ಮೊರೆ ॥ ಶ್ರೀಕೃಷ್ಣರಾಯ ॥ ೪ ॥

ದ್ವಿಪದಿ

ಇಂತೆಂದು ನಮಿಸಲವರುಗಳ ಮನ್ನಿಸುತ । ಕಂತುಪಿತನುಸಿರೆ ಶೃಂಗರವಾದಂದತ್ತ ॥ ೧ ॥ ಮುಖಶಾಲೆಯನು ರಚಿಸುತದಕೆ ಸುರಪುರದ । ಸಕಲ ವಿಸ್ತಾರಗಳ ಬರೆದು ಮಣಿಮಯದ ॥ ೨ ॥ ಮೇಲುಗಟ್ಟುಗಳಿಂದ ರಚಿಸಿ ಸಮ್ಮುಖದಿ । ಶಾಲೆಗಳ ವಿಂಗಡಿಸಲಾಗಪರಿಮಿತದಿ ॥ ೩ ॥ ಅಲ್ಲಲ್ಲಿ ಮಂಟಪಗಳೆಡೆಗೆ ಮುತ್ತುಗಳ । ಝಲ್ಲಿಗಳ ನೀಲಮಣಿಮೇಲುಗಟ್ಟುಗಳ ॥ ೪ ॥ ಉಪ್ಪರಿಗೆ ಚೌಕಿಚಾವಡಿಗಳೆಡೆಗೆಡೆಗೆ । ಚಪ್ಪರದಿ ಚತುರಂಗ ಬರೆದರಡಿಗಡಿಗೆ ॥ ೫ ॥ ಸಕಲ ಬೀದಿಯೊಳು ನವರತ್ನಮಯಮೆನಿಸಿ । ಮಕರತೋರಣ ಮೇಲುಗಟ್ಟುಗಳ ರಚಿಸಿ ॥ ॥ ೬ ॥ ಹೊರಗೆ ಯಮುನಾತಟದಿ ಧರಣಿಪಾಲರಿಗೆ । ಅರಮನೆಯ ವಿಂಗಡಿಸಿ ಕನಕಮಯಮೆಸಗೆ ॥ ೭ ॥ ಮಂಹಲೋಕದೊಳಗಿಲ್ಲವೆಂಬ ರಚನೆಗಳ । ಮೇಳವಿಸಿ ರಚಿಸಿದರನೇಕ ವಸ್ತುಗಳ ॥ ೮ ॥ ಇನಿತೆಲ್ಲವನು ತೋರಲುಡುಗೊರೆಯು ಸಹಿತ । ಘನವೇಗದಿಂದ ಶಿಲ್ಪಿಗರಿಗೊಲಿದಿತ್ತ ॥ ೯ ॥

ಭಾಮಿನಿ

ಅರಸ ಕೇಳಮರೇಂದ್ರನಗರದ । ಸಿರಿಗೆ ನೂರ್ಮಡಿಯೆನಿಸಿತದ ವಿ । ಸ್ತರಿಸಿ ಪೊಗಳಲನಂತಗಸದಳವೇನನುನಿರುಪೆನು ॥ ನೆರದಂದವನೀಶ್ವರರಂ ದ್ವಿಜಮುಂಪಿ। ವರರು ಸೈನಿಕವಿತತಿ ಕಂಡಾ । ಧರಣಿಪತಿಯಾಲೋಚಿಸುತ ಧೌಮ್ಯರನು ಕರೆದೆಂದ ॥ ೧ ॥

ರಾಗ ಭೈರವಿ ಝಂಪೆತಾಳ

ಗುರುವರ್ಯ ಕೇಳ್ ಮನದೊ । ಳಿರುವ ಯೋಚನೆಯಿನಿತ । ನೊರೆವೆ ಕೇಳೆನಲೆಂದ । ನರಿತೆ ತಾನದನು ॥ ೧ ॥ ಕೃಷ್ಣನೊಡನೀಪರಿಯು । ಕೇಳಿ ನಿಶ್ಚಯಿಂಸಲೆನು । ತೊಟ್ಟಾಗಿ ಬರೆ ಕಂಡು । ಸೃಷ್ಟಿಪನ ನೋಡಿ ॥ ೨ ॥ ಏನಾಗಬೇಕು ತವ । ಯಾಗಸಿದ್ಧಿಗೆ ಇಂತ । ಮೌನವ್ಯಾಕುಸಿರಿರನು । ಮಾನವೇನೆನಲು ॥ ೩ ॥ ಹರಿಯೆಂ ಇನ್ನಧ್ವರಕೆ । ಕೊರತೆಯಿಲ್ಲಾದರವ । ಧರಿಸೆನ್ನ ಮಾತನೆನೆ । ಮುರ ವೈರಿ ನಗುತ ॥ ೪ ॥

ಭಾಮಿನಿ

ಹೇಳು ಧರ್ಮಜ ಮರೆಯು ಮಾತದ । ನಾಲಿಸುವೆನೆನೆ ದೇವ ಲಕ್ಷ್ಮೀ । ಲೋಲ ಬಹುಜನ ನೆರೆದರೆಂಜಲು ಶುದ್ಧಿಯೆಂನಿಸುವರೆ ॥ ಹೇಳಿ ಬುದ್ಧಿಯನೆನೆ ನಗುತ ವನ । ಮಾಲಿ ಪುರುಷಾಮೃಗವ ತರಿಸಲು । ಹೇಳು ಭೀಮನ ಬೇಗ ಕಳುಹೆನಲರಸನಿಂತೆಂದ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಸ್ವಾಮಿ ಕೇಳಾ ಮೃಗವೆಲ್ಲಿಹುದೆನಲು ನಿ । ಸ್ಸೀಮನುತ್ತರದೆಸೆಯು ॥ ಹೇಮಾಚಲದ ದಕ್ಷಿಣದಿ ಮಾನಸವೆಂಬ । ಪ್ರೇಮದ ಸರಸಿಯುಂಟು ॥ ೧ ॥ ಆ ಸರಸಿಯ ತಡಿಯೊಳಗೊಂದು ವನದಿ ಸ । ದಾಶಿವಪೂಜೆಯಿಂದ ॥ ವಾಸವಾಗಿಹುದೆನಲೊಡನೆ ಭೀಮನ ಕರೆ । ದಾ ಶಶಿಕುಲಭೂಪನು ॥ ೨ ॥ ಕೇಳಯ್ಯ ಭೀಮ ಹೇಮಾದ್ರಿಯ ತೆಂಕಲು । ಭಾಳನೇತ್ರನ ಪೂಜೆಯು ॥ ಮೇಳದಿಂದಿಹ ಪುರುಷಾಮೃಗವನು ತಂದು । ಪಾಲಿಸದರನೆನಲು ॥ ೩ ॥ ಲೇಸೆನುತೆರಗಿ ಬೀಳ್ಕೊಂಡೈದಿ ನಡೆದ ವಿ । ಶೇಷಕ್ಕೆ ಧರೆಯುದುರೆ ॥ ಬೀಸುವ ಕಯ್ಯ ಭಾರಕೆ ಗಿರಿಮರಗಳು । ಘಾಸಿಯಾಯ್ತಪರಿಮಿತ ॥ ೪ ॥ ತಡೆದದ್ರಿಗಳ ಕಯ್ಯ ಗದೆಯಿಂದ ತಾ ಪುಡಿ । ಪುಡಿಗೆಯ್ದು ಹೂಂಕರಿಸಿ ॥ ಘುಡುಂಘುಡಿಸುತ ಸಿಂಹನಾದವ ತೋರಿಸಿ । ನಡೆದ ನೀಪರಿ ಭೀಮನು ॥ ೫ ॥

ವಾರ್ಧಿಕ

ಹುಲಿ ಕರಡಿ ಶಾರ್ದೂಲ ಸಿಂಹ ಶರಭಾದಿಗಳ । ಕುಲವಶೇಷವ ಕಡಿದು

ಜಡಿದಬ್ಬರಿಸಿ ನಡೆದು । ಕಲುಮರೌಘವ ಕೊಡಹಿ ಗಿರಿಗಂಹೆಗಳಂ ಮಡಂಹಿ ಬಲಃಭಯಂಕರದೋರುತ ॥ ಹಲವು ಯೋಜನ ನಡೆದು ಬರಲೀಪರಿಯು ಕೇಳ್ದ । ಕಲಿಹನುಮ ಪವನಜನ ಬರವಿದೆಂದರಿದವನ । ಬಲುಹನರಿದಪೆನೆಂದು ವೃದ್ಧ ಕಪಿ ತಾನೆಂದು ಮಾರ್ಗದೊಳು ಬಿದ್ದಿರ್ದನು ॥ ೧ ॥

ಕಂದ

ಗದೆಯಂ ತಿರುಹುತ ನಡೆತರ । ಲಿದಿರೊಳ್ ಬಿದ್ದಿರುವ ಕಪಿಯು ತಾ ನಿರುಕಿಸುತಂ ॥ ಮುದಿ ಜಂತುವೆ ಫಡ ತೊಲಗೆನು । ತದುಭುತ ಹರಿನಾದದೋರಿ ಮಿಗೆ ಬೆಸಗೊಂಡಂ ॥ ೧ ॥

ರಾಗ ದೇಶಿ ಅಷ್ಟತಾಳ

ಧೃಷ್ಟ ಕೋಡಗ ಕಪಿಯೇ ನೀ ಮಾರ್ಗವ । ಬಿಟ್ಟು ಸಾರೆಲೋ ಕಿಟ್ಟವನೆ ಫಡ । ಪೆಟ್ಟು ತಿನ್ನದೆ ತನೆಲ್ಲೊಳು ॥ ೧ ॥ ಇಷ್ಟಕಾರ್ಯ ನಿಮಿತ್ತ ನಾ ಬರುವಲ್ಲಿ । ಬಟ್ಟೆಗೊಡದಿರೆ ನಿನ್ನ ಬಾಯನಂ । ಕುಟ್ಟಿ ಹಲುಗಳ ತೆಗೆವೆನು ॥ ೨ ॥ ನೋಡು ಕೈಯೊಳು ಕುಣಿವ ಈ ಗದೆಯೊಳು । ತೋಡಿ ತೆಗೆವೆನು ನಿನ್ನ ಕರುಳನು । ಮಾಡುವಂತಿ ಮರಳೆಂದನು ॥ ೩ ॥

ರಾಗ ಶಂಕರಾಭರಣ ಏಕತಾಳ

ವೃದ್ಧರಾಗಿ ಬಿದ್ದೆವಿಲ್ಲಿಂ । ದೆದ್ದು ಪೋಗಲಾರೆ ತನ್ನ । ಹೊದ್ದಿನಿಂದಾಚೆಗೆ ಮಾರ್ಗ । ತಿದ್ದಿ ಹೋಗಯ್ಯ ॥ ೧ ॥ ಸ್ವಾಮಿಕಾರ್ಯದಿಂದ ಬಂದ । ಭೀಮ ತಾನೀಮಾರ್ಗ ಬಿಡೆನು । ನೀ ಮರಳೆಂದಿತ್ತನವನ । ಕೋಮಲಾಂಗಕೆ ॥ ೨ ॥ ಮತ್ತೆ ಭೀಮ ಕಯ್ಯ ಗದೆಯೊ । ಳೆತ್ತಿ ಪೊಯ್ಯಲಾಗಿ ವಾಯು । ಪುತ್ರನದ ಸೆಳೆಕೊಂಡನು । ಸತ್ತ್ವವೆಂತುಟೊ ॥ ೩ ॥ ರೌದ್ರನಾಗಿ ಹನುಮಂತ । ನೆದ್ದು ವಜ್ರಮುಷ್ಟಿಯಿಂದ । ಗುದ್ದಲಾಗ ಭೀಮ ಧರೆಗೆ । ಬಿದ್ದನಾಗಲೆ ॥ ೪ ॥

ಭಾಮಿನಿ

ಮಾರುತಜನ ಕರಹತಿಗೆ ಪವನಜ । ಶಿರವ ಬಾಗುತಲಕಟ ಪಾಂಡವ । ರರಸನಧ್ವರವಳಿದುದೇ ಹರಿವಜ್ರ ಪಂಜರವು ॥ ಕನಸಿದಾಯಿತೆ ಮಾರುತಾತ್ಮಜ । ನೆಸಿಪ ಪೆಸರೆನಗಿಂದು ಪುಸಿಯಾ । ಯ್ತೆನುತ ಚಿಂತಿಸುವಾತನನು ತೆಗೆದಪ್ಪಿ ತಿಂತೆಂದ ॥ ೧ ॥

ರಾಗ ಶಂಕರಾಭರಣ ತ್ರಿವುಡೆತಾಳ

ಅನುಜ ಚಿಂತಿಸಬೇಡ ಪವನಜ । ಹನುಮ ತಾನೂ ನಿನ್ನೊಡ । ನಿನಿತಂ ಕಲಹಗಳೊದಗಿ ತುರಿಯಂದೆ । ಮನದೊಳಕಟ ॥ ೧ ॥ ಧರ್ಮಜಾರ್ಜುನ ಯಮಳಕುಂತಿ । ಯಮ್ಮನವರಾ ಪಾದಕೆ । ನಿರ್ಮಲವೆ ನೀ ಬಂದುದನು

ಪೇ । ಳಿವೆಮ್ಮೊಳಿನಲು ॥ ೨ ॥ ಕಂಶಲರನಿಬರು ಜೀಯಂ ಹರಿ ನೇ । ಮಿಸಿದಂ ಮಾಳ್ಪ ಯಾಗಕೆ । ಎಸೆವ ಪುರುಷಾಮೃಗವ ತರುವೀ । ವಸಗೆ ತನಗೆ ॥ ೩ ॥ ಅದು ಮನೋವೇಗದಲಿ ನಡೆವುದು । ಅಘಟಿತನಕೆ ಬಗೆಯದು । ಇದು ಜಗಕೆ ಪರಿಹಾಸ ನೀ ಬಂ । ದೊದಗಿದಿನಿತು ॥ ೪ ॥ ಆ ಮೃಗವ ನಡೆಸಂವರದಾರೆನೆ । ಭೀಮ ಮುಗಿದಂ ಕರಗಳ । ಸ್ವಾಮಿ ನಿಮ್ಮಯ ಕೃಪೆಯಿರಲು ಭಯ । ಪೇ ಮಹಾತ್ಮ ॥ ೫ ॥

ಭಾಮಿನಿ

ಆದರಲೆ ಕಲಿಭೀಮ ಭಾಷೆಯ । ಕಾಯ್ದು ತೋರುವೆನೆನ್ನ ಬಾಲದ । ಕೂದಲಿನೊಳೇಳೆಂಟು ರೋಮವ ತೆಗೆದು ನೀಡೆನಲು ॥ ಕೈದುಡುಕಿ ತನಗುಳ್ಳ ಸತ್ತ್ವದ । ಲಯ್ದುಲರಿಯದೆ ದುಗುಡದಿಂದ ವೃ । ಕೋದರನು ತಿರುಗಿದನು ಸಮ್ಮುಖಕಾ ಕಪೀಶ್ವರನ ॥ ೧ ॥

ರಾಗ ಭೈರವಿ ಅಷ್ಟತಾಳ

ನಗುತಲಾ ಹನುಮಂತನು । ತನ್ನೂಜ್ರರೋ । ಮಗಳ ಕಿತ್ತವಗೇಳನು ॥ ಮಗುಳಿ ಕೊಟ್ಟೆಂದ ನಿನ್ನನು ಕಂಡು ತಿನಲೆಂದಾ । ವ್ಯಾಗರಾಜನಯ್ತಲು ॥ ॥ ೧ ॥ ನೀನೊಂದು ರೋಮವನು । ಅಲ್ಲಿಡೆ ರುದ್ರ । ತಾನಾಗುತಿಹುದದನು ॥ ಕಾಣುತ್ತ ಪೂಜೆ ಗೆಯ್ದಪ ನಡೆ ನೀ ಪವ । ಮಾನ ವೇಗದೊಳು ಕೇಳು ॥ ೨ ॥ ಮಗುಳಿ ಬೆಂಬತ್ತಲಾಗಿ । ರೋಮವನಿಡ । ಲಗಜೇಶಪೂಜೆಯಾಗಿ ॥ ಮೃಗ ವಿರುತಿರಲೋಡಿ ನಡೆಯಿದೇ ಕ್ರಮವೆಂದು । ನಗುತ ಬೀಳ್ಕೊಟ್ಟನಾಗ ॥ ೩ ॥ ಗಿರಿಗಹ್ವರಂಗಳೊಳು । ತಾ ಹಂಡುಕುತ್ತ । ಬರೆ ಮೇರುವಿನ ತೆಂಕಲು ॥ ಪರಿಮಳವಿಡಿವುತಯ್ತರುತಿರೆ ಮಾನಸ । ಸರಸಿಯು ಮೆರೆಯೆ ಕಂಡ ॥ ೪ ॥

ಭಾಮಿನಿ

ಆ ಸರೋವರದೊತ್ತಿನಲಿ ಹರ । ದಾಸನಮಲಾಂಗಕೆ ವಿಭೂತಿಯ । ಪೂಸಿ ಜಟೆಯನು ತಾಳ್ದು ರುದ್ರಾಕ್ಷಿಗಳ ಮಾಲೆಗಳ ॥ ಆ ಸುಕಂಠದಿ ಧರಿಸಿ ಹೃದ ಯದ । ಲಾ ಶಿವನ ಮೂರುತಿಯ ಚಿಂತೆಯ । ನೋಸರಿಸಿ ಹರಪೂಜೆಯಲಿ ಮೆರೆದಿರಲು ನೆರೆ ಕಂಡ ॥ ೧ ॥

ರಾಗ ಮಧ್ಯಮಾವತಿ ಆದಿತಾಳ

ಆ ಸಮಯದಿ ಮೃಗಪತಿಯಂದು ಶಿವಪೂಜೆ । ಯಾ ಸಮಸ್ತವ ಬಿಟ್ಟು ಮರಳಿ ಮಾನುಷರಾ ॥ ವಾಸನೆಯೆಲ್ಲಿಯದೆನುತ ನಾಲ್ದೆಸೆ ನೋಡ । ಲಾ ಸಮೀ ರಜ ಬಂದು ಪಾದಕೊಂದಿಸಲು ॥ ೧ ॥ ಭೀಮನ ಬಗಿದಪ್ಪುತಾರು ನೀನೆನೆ ಕೇಳ್ದು । ಸೋಮವಂಶದ ರಾಯರಾವು ಪಾಂಡವರು ॥ ಆ ಮಹೀಶನು ರಾಜ

ಸೂಯುಪೆಂದೆನಿಪಂತ । ನೇಮಂವ ಕೈಗೊಂಡನದಕೆ ನಿಮ್ಮುಮನಂ ॥ ೨ ॥ ಅಲ್ಲಿಗೆ ಕೊಂಡೊಯ್ಯಲಪ್ಪಣೆಯಾದರಿಂ । ದಿಲ್ಲಿಗೆ ಬಂದೆ ನೀವ್ ದಯುಮಾಡಿರೆನಲು ॥ ನಿಲ್ಲದಾರ್ಭಟಿಸಿ ಭೂಮಿಯುನುಗುರಲಿ ಸೀಳು । ತಲ್ಲಿ ಭೀಮಗೆ ಪೇಳ್ದನತಿ ದಯೆದೋರಿ ॥ ೩ ॥

ಭಾಮಿನಿ

ಕೇಳು ಪವನಜ ನಿನ್ನೊಡನೆ ಬಹೆ । ನೇಳು ನೀ ಹಿಂದುಳಿದೆಯಾದರೆ । ಕಾಲ ಹಿಡಿದಪ್ಪಳಿಸುವೆನು ಕೇಳೆನ್ನ ಭಾಷೆಯಿದು ॥ ಪಾಲಿಸೆನೆ ನಗುತಾ ಹಿಡಿಂಬಾ । ಲೋಲನತಿ ತೋಷದಿ ಕಪೀಂದ್ರನ । ಬಾಲಕೇಶವನೊಂದ ಹಾಯ್ಕಿದನಾತ ನಿದಿರಿನಲಿ ॥ ೧ ॥

ರಾಗ ಮಾರವಿ ಏಕತಾಳ

ಏನೆಂಬೆನು ಆ । ವಾನರರೋಮಂದಿ । ಪೂರ್ಣ ಕಳೆಯು ಶಿವ । ತಾನಾಗಲು ಮೃಗ । ಕಾಣುತ ಪೂಜೆಗೆ । ತಾನೊದಗಲು ಪವ । ಮಾನಿಯು ಬಹುಪಥ । ತಾ ನಡೆದಯ್ದಿದ ॥ ಏನನೆಂಬೆ ॥ ೧ ॥ ಮತ್ತಾ ಭೀಮನ । ಹತ್ತಿರೊದಗೆ ಕಪಿ । ಯಿಂತ್ತುದ ಬಿಸುಡಲು । ಮೃತ್ಯುಂಜಯುರೂ । ಪಾಯ್ತದನೇಕೋ । ಭಕ್ತಿಯೊಳೆರಗಿ ಮು । ರುತ್ತುಜನನು ಬೆಂ । ಬತ್ತಿತು ಮೃಗವು ॥ ಏನನೆಂಬೆ ॥ ೨ ॥ ಪುನರಪಿ ಹನುಮನ । ನೆನೆದಿಡೆ ಪುರ ನಾ । ಶನನವತರಿಸಲು । ಮನದಲಿ ಪೂಜಿಸಿ । ಮನುಜನುಯಿವನ । ಲ್ಲೆನುತನಿಲಜನನು । ತಿನಲಯ್ದಲಿಕಿ । ಟ್ಟನು ಕಪಿಕೇಶವ ॥ ಯೇನನೆಂಬೆ ॥ ೩ ॥ ಅದು ಶಿವರೂಪಾ । ದುದ ಕಂಡಿವ ವಿಧ । ವಿಧದಿಂ ಪೂಜಿಸು । ತೊದಗಿನೊಳಯ್ತರು । ವುದ ಕಂಡಿವ ಹಾ । ಯ್ಕಿದ ರೋಮದಿ ಶಿವ । ನುದಿಸಿದ ನಾನೆಂ । ತಿದ ಬಣ್ಣಿಪೆನು ॥ ಯೇನನೆಂಬೆ ॥ ೪ ॥

ವಾರ್ಧಿಕ

ಅರಸ ಕೇಳ್ ಕಪಿಯಿತ್ತ ರೋಮದಿಂದಲ್ಲಲ್ಲಿ । ಹರನ ಮೂರ್ತಿಯು ನಿರ್ಮಿಸಂತ ಮೃಗವ ನಡೆಸುತ । ಯ್ತರುತ ಗಿರಿಕಾನನ ಪ್ರದೇಶ ಬಹುರಾಷ್ಟ್ರಂಗಳನು ಕಳೆದು ಕಲಿಭೀಮನು ॥ ಬರಬರುತ ನಡೆದೋಡಿ ಬಂತೆಮ್ಮ ಯಾಗವಂ । ದಿರವೆನುತ ಪೊಕ್ಕಡಧ್ವರಶಾಲೆಬಾಗಿಲೊಳು । ನರನತ್ತ ಕೈಗೊಡಲ್ಕಿತ್ತ ಮೃಗವರನೆಳೆಯಲಾಯ್ತುವರಿಗತಿವಾದವು ॥ ೧ ॥

ಭಾಮಿನಿ

ಅತ್ತಲೆಳೆವ ಧನಂಜಯುನು ಮಗು । ಇತ್ತಲೆಳೆವ ಮೃಗೇಂದ್ರನತ್ತಲು । ಮತ್ತೆಳೆವನವನೀಶ್ವರಾರ್ಚಕನಿತ್ತ ನರಸೆಳೆವ ॥ ಅತ್ತಲಿತ್ತಲು ಸವೆಯುದಿಬ್ಬರ । ಸತ್ತ್ವವೆಂತುಟೊ ನಡುವೆ ಪವನಜ । ಪುತ್ರನತಿ ಬೇಡಾದನೆಲೆ ಜನಮೇಜಯು ಕ್ಷಿತಿಪ ॥ ೧ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಆ ಸಮಯದಿ ಕೃಷ್ಣ ಸಹಿತಲಿ । ಧರ । ಣೀಶ ಬಂದೀಕ್ಷಿಸುತಿವರಲಿ ॥ ಭಾಷೆಗಳಾದುದ ಕೇಳುತ್ತ । ನೀತಿ । ಶಾಸ್ತ್ರವ ಪೇಳ್ದೊಡಂಬಡಿಸುತ್ತ ॥ ೧ ॥ ಸರ್ವಗಾತ್ರದೊಳು ಪ್ರಧಾನವು । ಶಿರ । ಸರ್ವೇಂದ್ರಿಯಕೆ ಮುಖ್ಯ ನೇತ್ರವು ॥ ಸರ್ವೌಷಧಿಯೊಳನ್ನ ಮಿಗಿಲೆಂದು । ಇವ । ರೀರ್ವರ ಬಿಡಿಸಿ ಸಮ್ಮತವೆಂದು ॥ ॥ ೨ ॥ ಭೋಜನಶಾಲೆಗಳಿದಿರೊಳು । ವೃಗ । ರಾಜನ ಬಿಗಿಯೆ ತ್ರೈಜಗದೊಳು ॥ ರಾಜಧರ್ಮಜಗೆಣೆಯಿಲ್ಲೆಂದು । ಸುರ । ರಾಜ ಪೂಮಳೆಗರೆಯಲಿಕಂದು ॥ ೩ ॥

ಭಾಮಿನಿ

ಕೃಷ್ಣನಾ ಮೃಗದಿರವಸರಿದದ । ರಿಷ್ಟವಹ ಶಿವಲಿಂಗ ನಿರ್ಮಿಸಿ । ಕೊಟ್ಟಿಡದ ಪೂಜಿಸುತ ಮೆರೆದಿರಲಿತ್ತ ಧರ್ಮಜನ ॥ ಪಟ್ಟಣದ ಸಂಭ್ರಮವ ಪೊಗಳುವ । ದಿಟ್ಟರಾರುಂಟಪರಿಮಿತವಹ । ಸೃಷ್ಟಿಪಾಲರ ಬರವ ಬಣ್ಣಿಸಲರಿಯೆ ತಾನೆಂದ ॥

ರಾಗ ಭೈರವಿ ತ್ರಿವುಡೆತಾಳ

ಬಂದರಾಗ । ಭೂಪರು । ಬಂದರಾಗ ॥ ಪ ॥ ಬಂದರಾ ಚತುರಾಬ್ಧಿಯೊಳಗಾ । ನಂದ ಮಿಗಲಾಳುವ ಸಮಸ್ತರು ॥ ಬಂದರಾಗ ॥ ಅ ॥ ಕೊಂಬು ವೀಣಾ ತಾಳ ಮದ್ದಳೆ । ತಂಬಟೆಯು ರಣಕಹಳೆ ಪಟಹವಿ । ಡಂಬರವು ಶ್ರುತಿ ಭೇರಿ ಮೃದಂಗಗ । ಳೆಂಬ ನಾನಾ ವಾದ್ಯಘೋಷದೊ । ಳಂಬರವು ಬಿರಿದಖಿಳ ನೃಪರ ಕ । ದಂಬ ನಡೆವಬ್ಬರಕೆ ಧರೆ ಸ । ಪ್ತಾಂಬುಧಿಗಳಲ್ಲಾಡೆ ಸುರರ ಕು । ಟುಂಬ ನಭದಿಂದಿಳಿದು ಬಲು ಸೌ । ರಂಭದಲಿ ಧರ್ಮಜನ ಯಾಗದ । ಸಂಭ್ರಮಕೆ ನಡೆತಂದರೋಯೆನೆ ॥ ಬಂದರಾಗ ॥ ೧ ॥ ಭೂರಿ ಭೂರಿಶ್ರವನು ಬಾಹ್ಲಿಕ । ಶೂರಸೇನ ಕಳಿಂಗ ನೃಪಗಾಂ । ಧಾರ ಸೌಬಲ ಸೋಮದತ್ತ ಸು । ವೀರ ಪೌಂಡ್ರಕ ಸಾಲ್ವ ರುಕ್ಮ ಕ । ಠೋರಖಳ ಶಿಶುಪಾಲನವನ ಕು । ಮಾರ ತೌಳವ ದಂತವಕ್ರ ಸು । ಕೇರಳರು ಭಗದತ್ತ ಮುಖ್ಯ ಮ । ಹೀರಮಣರವರಖಿಳ ಬಲಸಹ ॥ ಬಂದರಾಗ ॥ ೨ ॥

ಭಾಮಿನಿ

ಸತ್ತಿಗೆಯೊಳಖಿಳಾನೆಕುದುರೆಯು । ಮೊತ್ತದೊಳು ಮೆರೆವವನಿಪರ ಯಮ । ಪುತ್ರ ಪರಿಜನಸಹಿತಿದಿರ್ಗೊಂಡವರನುಪಚರಿಸಿ ॥ ವಿಸ್ತರಿಸುತ ಬಿಡಾರಗಳ ತಾ । ನಿತ್ತು ಮನ್ನಿಸಲಿತ್ತ ಕೌರವ । ನಾಪ್ತಜನ ಸಹಿತುತ್ಸಹದಿ ಪೊರಮಟನರಮನೆಯು ॥ ೧ ॥

ರಾಗ ಕಾಂಭೋಜಿ ಝಂಪೆತಾಳ

ಗುರುಭೀಷ್ಮಧೃತರಾಷ್ಟ್ರ ಕರ್ಣದುಶ್ಯಾಸನೃಪ । ವೆರಸಿ ಗಾಂಧಾರಿ ಮೊದ

ಲಾದ ॥ ತರುಣಿಯರು ಸಹಿತಪರಿಮಿತ ವಾದ್ಯಘೋಷದಲಿ । ಪೊರಟರೇನೆಂಬೆ ನಿಜಪುರವ ॥ ೧ ॥ ಸೇನೆಸಹಿತತಿ ಪಯಣಗತಿಯೊಳೆಮಜನ ರಾಜ । ಧಾನಿ ಯನು ಪೊಗಲಿನಿತ ಕೇಳ್ದು ॥ ಆ ನೃಪತಿಯನುಜರೊಡಗೂಡಿ ಬಿರುದುಗಳಿಂದ । ತಾನಿದಿರ್ಗೊಂಡು ತವಕದಲಿ ॥ ೨ ॥ ಧೃತರಾಷ್ಟ್ರ ಮುಖ್ಯರಿಗೆ ನಮಿಸಿ ಕುಶಲ ಕ್ಷೇಮ । ದತಿಶಯವ ಕೇಳ್ದು ನಡೆತಂದು ॥ ಕ್ಷಿತಿಪ ಸತ್ಕಾರಗಳ ಮಾಡಿಯೆ ಬಿಡಾರಗಳ । ನತಿಜವದಿ ಬಿಂಗಡಿಸಿ ಕೊಡಲು ॥ ೩ ॥

ರಾಗ ಸಾಂಗತ್ಯ ರೂಪಕತಾಳ

ಜನಪ ಕೇಳಿತ್ತ ಕಶ್ಯಪಕಣ್ವಗೌತಮು । ಸನಕ ಜಾಬಾಲಿ ಕೌಶಿಕರು ॥ ಅನಲ ಭಕ್ಷಣಗಾರ್ಗ್ಯಬೃಹದಶ್ವಚ್ಯವನ ಜೈ । ಮಿನಿಯಾಜ್ಞವಲ್ಕ್ಯರುದು ॥ ೧ ॥ ಅತ್ರಿಭಾರದ್ವಾಜಾಂಗಿರಸ ಮಾರ್ಕಂಡೇಯ । ಮಿತ್ರಸುಮಂತನಾರದರು ॥ ವತ್ಸನುಭೃಗುಜಮದಗ್ನಿ ವ್ಯಾಸಾದಿ ಸ । ಮಸ್ತರು ಬರಲಿಭಪುರಿಗೆ ॥ ೨ ॥ ಹಲವು ಕಾನನದೇಶದೇಶನಿವಾಸರು । ಹಲವು ವೇದಾರ್ಥಸಂಹಿತರು ॥ ಹಲವು ವರ್ಣಾಶ್ರಮ ಫಲಮೂಲಾಹಾರದ । ಗ್ಗಳಿಯರ ಕಾಣಲಾಯ್ತಲ್ಲಿ ॥ ೩ ॥

ರಾಗ ರೇಗುಪ್ತಿ ಅಷ್ಟತಾಳ

ಭೂಸುರರಯ್ತಂದರಾಗ । ನಾನಾ । ದೇಶದ ಜನರತಿಬೇಗ ॥ ಪ ॥ ಶ್ರೀ ದೇವತಾರ್ಚನೆ ಪೆಟ್ಟಿಗೆಗಳ ಕೊಂಡು । ದ್ವಾದಶನಾಮಧೋತ್ರಗಳನುಟ್ಟು ॥ ವೇದಾರ್ಥಗಳ ತಾವು ವಾದಿಸಿ ನಡೆವ ವಿ । ನೋದದಿ ಧೋತ್ರದ ನೆರಿಯಾಡು ತಾಡುತ ॥ ಭೂಸುರ ॥ ೧ ॥ ಅನ್ನಾಪೇಕ್ಷಿತರು ಶ್ರೀಭಸ್ಮಧಾರಿಗಳತಿ । ಜೀರ್ಣ ವಸ್ತ್ರಗಳಿಂದಲಂಕರಿಸಿ ॥ ಸಣ್ಣಮಕ್ಕಳ ಕರಕೊಂಡು ಭೋಜನವೆಲ್ಲಿ । ಯೆನ್ನು ವರಪರಿಮಿತದಿ ಕಾಣಲಾದುದು ॥ ಭೂಸುರ ॥ ೨ ॥ ಸಮಿಧೆ ಪಲಾಶಾದಿಕುಶ ದರ್ಭೆಗಳ ಹೊರು । ತಮಿತಯೋಗಿಗಳತಿ ಭೂಸುರರು ॥ ತಮತಮಗೊಬ್ಬೊ ಬ್ಬರೊಡಗಿನೊಳಯ್ತಂದು । ಯಮಜನ ರಾಜಸೂಯದೊಳಿಂತು ಮೆರೆ ದುದು ॥ ಭೂಸುರ ॥ ೩ ॥

ಭಾಮಿನಿ

ವಿಕಳ ಬಿಂಹಲ ಮೂಕಬಧಿರಾಂ । ಧಕ ಸುಮಾಗಧ ಸೂತವಂದಿ । ಪ್ರಕರ ಮಲ್ಲ ಮಹೇಂದ್ರಜಾಲ ಮಹಾಹಿಪಂಡಿತರು ॥ ಸಕಲಶಿಲ್ಪಿಗವಾಗ್ಮಿವೈತಾ । ಳಿಕ ಸಂಗಾಯಕಮುಖ್ಯಯಾಚಕ । ನಿಕರವೆಸೆಯಲು ಬಳಿಕ ಭೀಷ್ಮಂಗೆರಗಿ ನೃಪ ನಂಡಿದ ॥ ೧ ॥

ರಾಗ ಭೈರವಿ ಝಂಪೆತಾಳ

ಪುಂಡರೀಗರಾವರಿಯೆಂವತಿ । ಪೊಡಪಪರ ಸತ್ಕರಿಸಿ । ನಡೆಯಿಸುವ ಬಹು

ಭಾರ । ವೊಡೆಯ ನಿಮಗೆನಲು ॥ ೧ ॥ ತೆಗೆದಪ್ಪುತೆಂದನೆಲೆ । ಮಗನೆ ಚಿಂತಿಸ ಲೇಕೆ । ಜಗದೇಕನಾಥಕೃಪೆ । ಸುಗುಣ ನಿನಗಿಹುದು ॥ ೨ ॥ ವೇಳೆಗಳೆಯದಿರೆ ನುತ । ಕೋಲಗುರುಸಹಿತೊಡನೆ । ಲೀಲೆಯಿಗೆ ಕೈಗೊಂಡ । ಮೋಲುನೋಟ ವನು ॥ ೩ ॥ ಆ ಜನದಿ ಧೃತರಾಷ್ಟ್ರ । ರಾಜಾಧಿಪತಿ ಧರೆಗೆ । ಪೂಜ್ಯನೆಂದಿರಿಸಿ ದರಂ । ಯಜ್ಞಶಾಲೆಯೊಳು ॥ ೪ ॥

ದ್ವಿಪದಿ

ಹೋಮಸಾಹಿತ್ಯಗಳು ಧೌಮ್ಯರಿಂದೊದಗೆ । ಆ ಮಹೀಶರ ಪಾರುಪತ್ಯ ಸಂಜಯಗೆ ॥ ೧ ॥ ಸಹದೇವ ಯಜ್ಞಪಾತ್ರಿಕರ ಮನ್ನಣೆಗೆ । ಬಹು ಭೋ ಜನಧಿಕಾರವಾ ಯುಯುತ್ಸುವಿಗೆ ॥ ೨ ॥ ಭೂಸುರರ ವ್ಯವಹರಣೆಯಾವಿಕರ್ಣ ನೊಳು । ದುಶ್ಶಾಸನಗೆ ವೀಳ್ಯಗಂಧಾಕ್ಷತೆಗಳು ॥ ೩ ॥ ಸಾಲದುದ ತರಿಸಿಕೊಡು ವಾರ್ರೈಕೆ ಕೃಪಗೆ । ತೈಲಘೃತಮಧುಶರ್ಕರಗಳಂ ವಿದುರನಿಗೆ ॥ ೪ ॥ ಆದ್ಯಂತ ನೃಪರಿಗುಡುಗೊರೆ ಕರ್ಣ ಕೊಡಲಾ । ಮಾದ್ರೇಶ ಋಷಿಗಳಿಗೆ ಕೊಡುವ ನುಚಿತಗಳ ॥ ೫ ॥ ಸಕಲಮಣಿಕಾಂಚನವು ಕೌರವಾಧೀನ । ನಕುಲಗವರವ ರುಚಿತ ಮಧುರತರವಚನ ॥ ೬ ॥ ನೃಪರ ಸೇವಾಜನಗಳಂಪಚಾರವೆಲ್ಲ । ದ್ರುಪದನಿಂಗಾಯ್ತುದರ ಪೇಳಲಳವಲ್ಲ ॥ ೭ ॥

ಭಾಮಿನಿ

ಆ ಮಹೋತ್ಸಹದಲಿ ನೃಪಾಲಗೆ । ಭೀಮನುಸಿರಿದ ನಮ್ಮ ಕೌರವ । ಗಾ ಮಯನ ಮಂಟಪವ ತೋರಿಸಬೇಕೆನಲು ಕೇಳ್ದು ॥ ಆ ಮಹೀಶನ ಕರೆತರಲು ಸು । ತ್ರಾಮಸುತನನಂ ಕಳುಹಲಯ್ತಂ । ದಾ ಮಹಾಸಭೆಯೊಳಂ ಸುಯೋಧನ ಗೆಂದನಾ ಪಾರ್ಥ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ದಯದಿ ಕೇಳಾದರೀಮಾತ ನಮ್ಮಣ್ಣಗೆ । ಮಯನಿತ್ತ ಮಂಟಪವು ॥ ಜಯಿಂ ಸಿರಿಯೋಲಗದೇವನಿರ್ಮಿತ ಮಹಿ । ಮೆಯ ಪೇಳಲಸದಳವು ॥ ೧ ॥ ಆ ಸಿಂಹಾಸನದಿ ನಿಮ್ಮೊಡಗೂಡಿ ಮೆರೆವಭಿ । ಲಾಷೆ ನಮ್ಮಣ್ಣನಿಗೆ ॥ ನೀ ಸಹೋ ದರರೊಡನಯ್ತಂದು ಸೋಳ್ಪುದೆ । ಮ್ಮಾಸಭೆಗಳನೆನಲು ॥ ೨ ॥ ನಗುತ ಕರ್ಣನ ನೋಡಿ ಬೆಸಗೊಂಡನಿವನೆಂದ । ಬಗೆಯರಿತೆಯ ಮನದಿ ॥ ಅಗಣಿತ ದೇವನಿರ್ಮಿತವಾಗಿ ಮೆರೆದಿರ್ಪೊ । ಲಗವುಂಟೆಂಬಿನಿತೆಲ್ಲವ ॥ ೩ ॥ ನಾವಲ್ಲಿ ಕೂಡಿ ರಂಜಿಸಬೇಕೆಂಬನಿತಣ್ಣ । ದೇವರಿಗೆಂದೆಂಬುದೇನು ॥ ದೇವೇಂದ್ರಸುತ ನಮ್ಮೊಳೊರೆದ ಸಂಗತಿ ನಿನ್ನ । ಭಾವವೇನೆನಲೆಂದನು ॥ ೪ ॥ ಲೇಸಿನ ನುಡಿ

ಯಣ್ಣಗಿನಿತಿದ್ದವೇಲೆ ವಿ । ಶೇಷ ಕೌತುಕ ಮೆರೆವ ॥ ಆ ಸಭೆಗಳ ನೋಡಲನು ಮಾನವೇನು ಸಂ । ತೋಷ ಕಾರ್ಯವಿದೆನಲು ॥ ೫ ॥

ಭಾಮಿನಿ

ಅತ್ತ ಯಮಸುತನಖಿಳ ನೃಪರೊಡ । ನುತ್ಸಹದಿ ದ್ರೌಪದಿ ಸಖೀಜನ । ವೆತ್ತು ಮಯನಿರ್ಮಿತದ ಮಂಟಪದೊಳಗೆ ರಂಜಿಸುವ ॥ ಚಿತ್ರ ಕೌತುಕವೆಸೆದು ಮಣಿಮಯ । ರತ್ನ ತೇಜಃಪುಂಜ ಚಂದ್ರಾ । ದಿತ್ಯಶತಶೋಭೆಯಲಿ ಮೆರೆದಿಹುದಾ ಸಭಾಸ್ಥಾನ ॥ ೧ ॥

ರಾಗ ಕಾಂಭೋಜಿ ಝಂಪೆತಾಳ

ಅಂದಿನೋಲಗಕೆ ನೃಪನನುಜರೊಡಗೂಡಿ ಬರ । ಲೊಂದು ಠಾವಿನೊಳಿಪ್ಪ ಕೊಳದಿ ॥ ಕೆಂದಾವರೆಗಳೆಸೆಯಲದನೀಕ್ಷಿಸಲು ಪೋಗ । ಲೊಂದೆಸೆಯೊಳಾಯ್ತು ತಿಪ್ರಭೆಯು ॥ ೧ ॥ ಅಲ್ಲಿ ಯಮುನಾನದಿಯು ಹರಿಯುತಿರಲೀಕ್ಷಿಸುತಿ । ದೆಲ್ಲಿಂದ ಬಂತೆನುತಲೊದಗಿ ॥ ಮೆಲ್ಲನುದಕದಿ ಕಾಲು ಪೊಗ ತೊಳೆಯಲೊದಗೆ ನೀ । ರಿಲ್ಲ ಪ್ರಭೆಸಹಿತಿಲ್ಲದಾಯ್ತು ॥ ೨ ॥ ಕತ್ತಲೆಯು ಕಳೆದಿವರು ನಡೆದು ಕಣ್ಮುಚ್ಚಿದರು । ರತ್ನಾವಳಿಯ ಪ್ರಭೆಗಳಿಂದ ॥ ಎತ್ತ ನೋಡಲು ಕಾಂತಿ ಪ್ರಜ್ವಲಿಸೆ ಕಂಗೆಟ್ಟು । ಮತ್ತೆ ಹೊಲಬಳಿದು ಧೃತಿಗೆಟ್ಟು ॥ ೩ ॥ ಬಲುಂ ಭೀತಿ ಕೈಗೊಂಡು ಹೆಜ್ಜೆಯಿಡಲಂಜುವರು । ಥಳಥಳಿಪ ನೀಲಪ್ರಭೆಯಿಂದ ॥ ಜಲವೆ ನೆಲರೂಪಾಗಿ ನೆಲವೆ ಜಲವೆನಿಸಿ ಕಂ । ಗೊಳಿಸಿತು ಸಮುದ್ರದೋಪಾದಿ ॥ ೪ ॥ ಕುರುಪತಿಯು ಸಹ ಭೂಮಿ ನದಿಯೆಂದು ಬಗೆದು ಮುಂ । ಚೆರಗ ಸಂವರಿಸುತಯ್ತರಲು ॥ ತರುಣಿಯರು ಹಾಯೆಂದು ನಸುನಗುತ ಚಪ್ಪಳಿಸೆ । ಅರಿತು ತಲೆತಗ್ಗಿಸಿದ ನಾಚಿ ॥ ೫ ॥ ಬೀದಿಯಲಿ ಬರುತ ಕೊಳನನು ಕಂಡು ಹಿಂದಣೋ । ಪಾದಿಯೊಳಗದರ ಲೆಕ್ಕಿಸದೆ ॥ ಸೋದರರು ಸಹಿತ ಲಡಹಾಯ್ತು ಕೊಳನೊಳು ಬಿದ್ದು । ಬಾಯ್ಬಿರೆದು ಕುಡಿದರುದಕಗಳ ॥ ೬ ॥

ಕಂದ

ಕೌರವನನುಜರು ಸಹಿತಲಿ । ನೀರೊಳು ಮುಳುಗುತ್ತಲೆದ್ದು ನಡುನಡುಗುತ್ತಂ ॥ ಭೂರಿ ಭಯಂಗೊಳಲಿತ್ತಲಂ । ನಾರಿಯರೀತೆರದಿ ನುಡಿದರತಿ ಹಾಸ್ಯದೊಳಂ ॥ ೧ ॥

ರಾಗ ನೀಲಾಂಬರಿ ಏಕತಾಳ

ನೋಡಕ್ಕ ಕೌರವನು । ತಮ್ಮಂದಿರೊಡ । ಗೂಡಿ ನೀರೊಳಗೆ ತಾನು ॥ ಓಡಾಡುತಿಹನಾತಗೆ । ಈ ಭ್ರಾಂತು ಕೈ । ಗೂಡಿತೆಂತುಸಿರೆನಗೆ ॥ ೧ ॥ ಆಳುವ

ಭೂಪಾಲರಂ । ಇಂತಾದಮೇಲೆ । ಬಾಳುವುದೆಂತು ಜನರು ॥ ಮೇಲಿನ್ನು ರಾಜ್ಯವೆಲ್ಲ । ಧರ್ಮಜಗನು । ಕೊಲದಿ ದೊರಕಿತಲ್ಲ ॥ ೨ ॥ ದುಷ್ಟರೆಂದೆನಿಸಿ ತಾವು । ನಡೆದುದರಿಂದ । ಲಿಪ್ಪಾಯಿತನುಭವವು ॥ ಕೃಷ್ಣ ಪಾಂಡವರ ತಾನು । ಪಾಲಿಸಿ ಮನ । ದಿಷ್ಟವ ದಯುಗೆಯ್ದನು ॥ ೩ ॥ ಯಾತಕೀತೆಂಬೆಯುವ್ವ । ಈ ಮಂಟಪದ । ನೂತನವಿನಿತೆಲ್ಲವ ॥ ಆತಗಳರಿಯಂದಯ್ದಿ । ನೀರೊಳು ಬಿದ್ದೀ । ರೀತಿಯಾಯ್ತೀ ದಿನದಿ ॥ ೪ ॥ ಕುಲಕಂಟಕರಿಗಳಿವು । ಬಾರದೆಂಬಂದು । ಕಲಿ ಯುಗದೊಳು ದಿಟವು ॥ ಜಲಜಾಕ್ಷ ಭೂಮಿಭಾರ । ರಿವರನು ಕೊಂದು । ಸಲಹನೆ ಪಾಂಡವರ ॥ ೫ ॥

ಭಾಮಿನಿ

ಇತ್ತ ದ್ರೌಪದಿಸಹಿತ ಸತಿಯರ । ಮೊತ್ತವೀಪರಿಯಾಡಿ ನಗುತಿರ । ಲತ್ತ ಕೊಳನೊಳಗುರುಳಿ ತಡಿಗಡರುತ್ತ ಕೌರವನು ॥ ಅತ್ಯಧಿಕ ದುಗುಡದಲಿ ನಿಂದಿರ । ಲಿತ್ತ ದಿವ್ಯದುಕೂಲಗಳ ಯಮ । ಪುತ್ರ ಕಳುಹಿದ ಬಳಿಕವರ್ಗಳ ವಿಧಿಯು ಕೇಳೆಂದ ॥ ೧ ॥

ರಾಗ ಮುಖಾರಿ ಏಕತಾಳ

ಇನ್ನು ಮೇಲಣ ಮಾನಭಂಗ । ಲಾಲಿಸಲಲ್ಲಿ । ಕನ್ನಡಿ ಮೆರೆಯೆ ಬಹು ಮಾರ್ಗಂಗ ॥ ಳಿನ್ನಿದೆ ಬಾಗಿಲಿ । ದೆನ್ನುತಲಡಹಾ । ಯ್ದುನ್ನತ ಶಿರ ರಕು । ತಾರ್ಣವವಾಗಲು । ವರ್ಣಿಸಿ ನಗುತಿಹ । ಕನ್ನೆಯರ್ಧ್ವಾಸ್ಯಕೆ । ಖಿನ್ನತೆಯೊಳು ನೃಪ । ನುನ್ನತಿಯುಳಿದುದು ॥ ೧ ॥ ಮಾನಭಂಗಗಳಿನಿತೆಲ್ಲ । ಸಾಕೆಂದು ಮುಂದೆ । ತಾನಯ್ದಿ ಗೋಡೆ ಗೋಡೆಯೆಲ್ಲಾ ॥ ತಾನರಸುತ ಬರೆ । ಕಾಣದೆ ಮಾರ್ಗವ । ಕ್ಷೋಣಿಪ ಕೌರವ । ತಾನತಿಶಯದು । ಮ್ಮಾನದೊಳಿರುತಿರೆ । ಕಾಣುತ ದ್ರೌಪದಿ । ನಾನಾ ಹಾಸ್ಯದೊ । ಳಾ ನೃಪಗೆಂದಳು ॥ ೨ ॥

ರಾಗ ಶೃಂಗಾರಿ ಏಕತಾಳ

ಭಾವನವರಿಗಿಂತು ಕಣ್ಣು ಕಾಣದಮೇಲೆ । ಜೀವಿಸಿ ಮೆರೆವುದರಿಂದ ॥ ಸಾಯುವುದೊಳ್ಳಿತು ನಿಮಗಿನಿತು ಸಂಭವಿಸಿತೆ । ಹಾ ವಿಧಿಯೆಂದಳು ನಗುತ ॥ ॥ ೧ ॥ ಭ್ರಾಂತೊದಗಿತು ನಿಮಗಿಂತಾದ ಮೇಲೆ ನೀ । ವಿಂಥಾ ಸಭೆಗೆ ಬರ ಬಹುದೆ ॥ ಪಂಥವುಳ್ಳವರಿನ್ನು ಮರುಳರೆನ್ನುತ ನಿಮ್ಮ । ನೆಂತು ನಿಂದಿಸದಿರು ತಿಹರು ॥ ೨ ॥ ಜಲದಲ್ಲಿ ಮುಳುಗಿದ್ದು ಸಾಲದೀಗೆರಡನೆ । ತಲೆ ನೊಂದು ರುಧಿರ [illegible] । [illegible]ದಪ್ಪಿದಿರಿ ಕಂಗಳು ಕಾಣದೀ ಸಾರಿ । ದ[illegible] ಬಾಧಿಸಬೇಕ್ಕೇ ॥ ೩ ॥ ಸಂಚರ್ಯ ಕೃತ್ಯದ ಫಲವೊ ಪಿತ್ತವು ತಲೆ ।

ಗೇರಿ ಚಾಳಿಪುದೊ ನಿಮ್ಮ್ಮವನು ॥ ಪ್ರಾರಬ್ಧಕರ್ಮವೊ ತಿಳಿಯುದೆನ್ನುತಲಿಂತಂ । ಭೂರಿ ಭಂಗಿಸಿ ತಿರುಗಿದಳು ॥ ೪ ॥

ಕಂದ

ಪರಿಪರಿಯಿಂದಾ ದ್ರೌಪದಿ । ಕುರುಪತಿಯುನಂ ಭಂಗಿಸುತ್ತ ತಾ ಪಿಂತಿರುಗಲ್ ॥ ಧರಣಿಪ ಕೇಳ್ದಾ ಮಾತಿಗೆ । ಧರೆಗುರುಳುತ ಚಿಂತಿಸಿದನಂ ಮಿಗೆ ಮಂನ್ಮನದೊಳ್ ॥ ೧ ॥

ರಾಗ ರೇಗುಪ್ತಿ ರೂಪಕತಾಳ

ಹರ ಹರಾ ಮಂಂದಿನ್ನೇನೆನಗೆ । ಕರುಣಿಸಿತ್ತೀ ಸಭೆಯೊಳಗೆ ॥ ಪರಿಪರಿಯುವಮಾನಂಗಳು । ದೊರಕಿತೆನಗಿಂದೀ ದಿನದೊಳು ॥ ಹರ ॥ ೧ ॥ ಸತ್ಯವಂತಯಂಮಜನೊಳಗೀ । ಕೃತ್ರಿಮಂಗಳಂಟೆನುತ ನಾ ॥ ಕೃತ್ಯವಾಲೋಚಿಸದೆ ಬಂದು । ವ್ಯರ್ಥ ಮಾನಗೆಟ್ಟೆನಿಂದು ॥ ಹರ ॥ ೨ ॥ ಯಾಕಿಲ್ಲಿಗಯ್ತಂದೆನು ನಾ । ನೀ ಕುಟಿಲರೆಡೆಗೆ ಮುಂದೆ ॥ ಆ ಕರ್ಕಶೆಯು ಮಾತು ಮನ । ಮಂಕನಾ ಮಾಡಿದುದೆನ್ನ ॥ ಹರ ॥ ೩ ॥ ಮಾನಭಂಗವಯ್ದಿ ಪುರಕೆ । ತಾನೆಂತಯ್ದುವೆನಿನ್ನು ದಿಟಕೆ ॥ ಕಾನನಾಂತರದಿ ದಿನವ ಕಳೆದು । ನೀಗುವೆ ತನುವ—

ವಚನ

ಈ ರೀತಿಯಿಂದ ಕೌರವನು ಪ್ರಲಾಪಿಸಲಾಗಿ ಆಗ ಕರ್ಣನಂ ಬಂದು ಧೈರ್ಯವನ್ನು ಪೇಳುತಲಿರ್ದನದೆಂತೆನೆ—

ರಾಗ ಸೌರಾಷ್ಟ್ರ ತ್ರಿವುಡೆತಾಳ

ಲೇಸಿನಿತು ಶತ್ರುಗಳ ಮನೆಯು ಸು । ವಾಸಿನಿಯುರಿದಿರಿನಲಿ ನೀನತಿ । ಕ್ಲೇಶಿಸಿದರಾರರಿವರತಿ ಪರಿ । ಹಾಸವೈಸೆ ॥ ೧ ॥ ಪಾಡು ಪಂಥ ಪರಾಕ್ರಮವು ಕೈ । ಗೂಡಿರುವುದೆಲ್ಲವನಂ ಹಗೆಗಳಿ । ಗಾಡಿ ತೋರಿಸಲೊಂದು ದಿನವಿದೆ । ನೋಡಬಹುದಂ ॥ ೨ ॥ ನಮಗೊದಗಿದಪಮಾನವೊಂದಕೆ । ಅಮಿತ ಕ್ಲೇಶಗಳನ್ನು ಪಗೆಗಳ । ರಮಣಿಯುರಿಗಂಣಬಡಿಸದಿರೆ ವಿ । ಕ್ರಮಂದೊಳಿನ್ನು ॥ ೩ ॥ ಎನುತ ನಾನಾ ಧೈರ್ಯಗಳನಾ । ಜನಪಗರುಹಿಸಿ ಸಂತವಿಸುತಾ । ತನನಂ ಕರೆಕೊಂಡೊಯ್ದನಾ ನೃಪ । ಜನರ ಸಭೆಗೆ ॥ ೪ ॥

ಭಾಮಿನಿ

ಇತ್ತ ಋಷಿಗಳಂ ಯಾಗಕುಂಡವ । ಶಾಸ್ತ್ರವಿಧದಲಿ ರಚಿಸಿ ಬಹು ಸಾ । ಹಿತ್ಯಗಳಂ ಬಂದೊದಗೆ ವೇದವ್ಯಾಸನಾಜ್ಞೆಯುಲಿ ॥ ಮತ್ತದಕೆ ಬಂದಿರುವ ದಿವ್ಯಸ । ಮಸ್ತ ಋಷಿಗಳ ಮಿಂಗಡಿಸಿ ಭೂ । ಪೋತ್ತಮಗೆ ಮುನಿಯೆಂದ ದೀಕ್ಷಿತನಾಗು ನೀನೆನಂತ ॥ ೧ ॥

ರಾಗ ದೇಶಿ ಏಕತಾಳ

ಆಗಲಯ್ದಿ ಭೂಪ ಕೃಷ್ಣ । ನಂಘ್ರಿಗಳ್ಗೆ । ತಲೆ । ವಾಗುತೆಂದ ನಿಮ್ಮ ಕೃಪೆ । ಯಿಂದಿವರ್ಗೆ ॥ ಯಾಗವಿನಿತಂ ಮೆರೆದು ಸಕಲ । ಸಾಹಿತ್ಯಂಗಳು । ನಾಲ್ಕು । ಸಾಗರಮಧ್ಯದಿ ಜಯಿಸಿ । ಬಂತು ಕೇಳು ॥ ೧ ॥ ಲಕ್ಷ್ಮೀನಾಥ ನಿಮ್ಮ ಕೃಪೆಯಿಂ । ದಯ್ಸ್ಮ ಮುಂದೆ । ನೀನೆ । ದೀಕ್ಷೆಯಾಗಿ ಕ್ರತುವ ಕೈಗೊ । ಳೆನ್ನ ತಂದೆ ॥ ರಕ್ಷಿಸೆಂದು ಪಾದಕೆರಗಿ । ನುತಿಸೆ ಕಂಡು । ತಾ ಕ । ಟಾಕ್ಷದಿಂದ ತೆಗೆದಪ್ಪುತಾ । ನಂದಗೊಂಡು ॥ ೨ ॥ ಬಾಯೆನ್ನಾನೆ ಮುದ್ದು ಕಣಿಯೆ । ಧರ್ಮರಾಯ । ಮುಂದೆ । ಈ ಯಜ್ಞಕ್ಕೆ ನೀ ದೀಕ್ಷೆಯ । ಕೈಗೊಳಯ್ಯ ॥ ಆಯಿತಿನ್ನೇನಖಿಳಾಭೀಷ್ಟ । ಸಿದ್ಧಿ ಕೇಳು ಮುಂದೆ । ಶ್ರೇಯಸಾಗಲೆಂದು ಹರಸಿ । ದನು ಕೃಪಾಳಂ ॥ ೩ ॥

ಭಾಮಿನಿ

ಭಕ್ತಿಯಲಿ ಕಯ್ಗೊಂಡಂ ಕಯ್ಗೆ ಪ । ವಿತ್ರವನು ಜೋಡಿಸುತ ಋಷಿಗಳ । ಮೊತ್ತದೊಳು ಬಂದೆಸೆದ ಯಜಮಾನತ್ವ ಕಯ್ಗೊಂಡಂ ॥ ಅತ್ತಖಿಳ ನೃಪಜಾಲ ನೆರೆದು ಸ । ಮಸ್ತರೋಲಗಗೊಟ್ಟು ರಂಜಿಸ । ಲಿತ್ತ ಋಷಿಗಳ ವೇದಘೋಷದಿ ಮೆರೆದುದಾ ವಿಭವ ॥ ೧ ॥

ರಾಗ ಪಂತುವರಾಳಿ ಮಟ್ಟೆತಾಳ

ಏನನೆಂಬೆ ನೃಪತಿಯಜ್ಞವ । ಪೊಗಳಲರಿದು । ದಾನಧರ್ಮಗಳ ಮಹೋತ್ಸವ ॥ ಏನನೆಂಬೆ ॥ ಪ ॥ ಚರುತಿಲಾದಿ ದರ್ಭೆ ಸಮಿಧೆ । ಹೊರೆಗಳೊದಗಿ ತಪರಿಮಿತದಿ । ಪರಿಪರಿಯಲಿ ಮುನಿಗಳೆಲ್ಲ । ನೆರೆದು ವೇದಘೋಷದಿಂದ । ಧ್ವರಕೆ ಪೊಗಿಸುತಗ್ನಿದೇವರ । ನಾಲ್ಕು ವೇದ । ಸ್ವರದಿ ಹೋಮತೊಡಗಲೀತೆರ । ಅಗ್ನಿಸುರರ । ಪುರವ ತಂಡುಕಲಲ್ಲಲ್ಲಿ ಸುರರು । ಮೆರೆದು ನೃಪನ ಪೊಗಳುತಿರ್ದರೇನನೆಂಬೆ ನೃಪತಿಯಜ್ಞವ ॥ ೧ ॥ ಬಿಡದೆಯೇಳುದಿವಸವಿಂತಂ । ನಡೆದುದೆಮಜರಾಜಸೂಯ । ದೆಡೆಯೊಳುಂಡ ಭೂಮಿಂಪರ್ಗೆ । ಕಡೆಯ ಕಾಣೆ ನಾಲ್ಕು ಯುಗದ । ಪೊಡವಿಪಾಲರಿನಿತಂ ಮುಖವನು । ಮಾಡಲಿಲ್ಲ । ನುಡಿಯಂಲೆಂತು ಪಾಂಡುಭೂಪನಂ । ಸುರರ ಪೀಠ । ವಡರಲವನ ಕಾಣಲಮರ । ಗಡಣಕಿನಿತಂ ಸಮಯ ದೊರಕ ದೇನನೆಂಬೆ ॥ ನೃಪತಿ ಯಜ್ಞವ ॥ ೨ ॥

ವಾರ್ಧಿಕ

ಪೂರ್ಣಾಹುತಿಯ ಬಳಿಕ ಪಾಂಡುಸುತರಿಂಗೆ ಸಂ । ಪೂರ್ಣ ಕಲಶಾಭಿಷೇಕದಿ ದೇವದುಂದುಭಿಗ । ಳುನ್ನತದ ಪೂಮಳೆಗಳೆಸೆಯೆ ವಸ್ತ್ರಾಭರಣ ಭೂದಾನ ಗೋದಾನದಿ ॥ ಮನ್ನಿಸಿದನಖಿಳ ಭೂಸುರರ ಋಷಿಗಳನಿನಿತ । ವರ್ಣಿಸು

ವಡರಿದು ಯಾಚಕರು ಮೊದಲಾಗಿಹ ಜ । ನಾರ್ಣವದಿ ನೃಪಧನವ ಪೊತ್ತು ನಡೆವುತ ದಣಿದುದೇನೆಂಬೆನದ್ಭುತವನು ॥ ೧ ॥

ಕಂದ

ಆ ಸಮಯಂದಿ ನವರತ್ನ ವಿ । ಶೇಷದಿ ಮೆರೆವಾರತಿಯಂನು ಸತಿಯುರಂ ಮಂದದಿಂ ಚೌಸ್ವರದಿಂದಲಿ ಪಾಡಿ ಮಂ । ಹೀಶರಿಗೆತ್ತಿದರು ಜವದಿ ನೂತನ ದಿಂದಂ ॥ ೧ ॥

ರಾಗ ಧವಳಾರ ಆದಿತಾಳ

ಶ್ರೀಸರಸಿಜನೇತ್ರೆಯಂರು । ತೋಷದಿ ನಡೆತರುತವರು । ಭೂಸುರರೊಲಿದು ಮಂತ್ರಾಕ್ಷತೆಯಿಂದ । ಸೇಸೆಯ ತಳಿದು ಕೀರ್ತಿಸಿ ಮಂದದಿಂದ ॥ ಮೊಸದೆ ಕೀರ್ತಿಯಂ ಪಡೆಯಿಂರೆನುತ ಧರ । ಣೀಶರಿಗಾರತಿಯಂ ಬೆಳಗಿರೆ ॥ ಶೋಭಾನೆ ॥ ॥ ೧ ॥ ರಾಜಾಧಿರಾಜ ಧರ್ಮಜಗೆ । ರಾಜಿಪ ಭೀಮಸೇನನಿಗೆ । ಮೂಜಗ ದಲ್ಲಣನೆನಿಪರ್ಜುನಗೆ । ತೇಜಿಪರೆಮಳರುನ್ನತ ಭಾಗ್ಯರಿಗೆ ॥ ರಾಜೀವಾಂಬಕಿ ದ್ರುಪದಕುಮಾರಿ ವಿ । ರಾಜಿಸುಂವಾರತಿಯಂ ಬೆಳಗಿರೆ ॥ ಶೋಭಾನೆ ॥ ೨ ॥ ಸೋಮಕುಲಾಬ್ಧಿಚಂದ್ರರಿಗೆ । ಕಾಮಿತಗುಣವೃಂದರಿಗೆ । ದಾಮೋದರನತಿ ಶಯಂಭಕ್ತರಿಗೆ । ಭೂಮಿಗಧಿಕ ಪಾವನಚರಿತರಿಗೆ ॥ ರಾಮಚರಿತ್ರ ಸುಧಾಮಯಂ ರೂಪಗೆ । ಹೇಮಂದಾರತಿಯು ಬೆಳಗಿರೆ ॥ ಶೋಭಾನೆ ॥ ೩ ॥

ಭಾಮಿನಿ

ಕೇಳಂ ಜನಮೇಜಯನೆ ಬಳಿಕ ವಿ । ಶಾಲ ಮುನಿ ಮಧ್ಯದೊಳಂ ನಿಮ್ಮ ನೃ । ಪಾಲ ಭೀಷ್ಮಂಗೆಂದನತಿ ಗಂಭೀರನಾದದಲಿ ॥ ಬಾಳನೇತ್ರನ ಪರಿಯೆನಿಪ ಭೂ । ಪಾಲರಿದರೊಳಗಗ್ರಪೂಜ್ಯರ । ಪೇಳಿರೆನೆ ಗಾಂಗೇಯ ನುಡಿದನು ವೇದಸಮ್ಮತವ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಕಂದ ಕೇಳಂಬರದೊಳಗಿರುವಮರರೊ । ಳಿಂದ್ರ ದಿಕ್ಪಾಲಪಜ್ಞ್ಯಾತ್ರಯಲಿ ॥ ಇಂದುಶೇಖರನೀ ಭೂಮಿಗೆ ಪೂಜಾಪಾತ್ರ ಗೋ । ವಿಂದನಲ್ಲದೆ ಬೇರಿನ್ನೊಂಟೆ ॥ ॥ ೧ ॥ ಮೇರುಸಾಗರದ ವಿಚಾರದವೊಳಗೆ ಶ್ರೀ । ನಾರಾಯಣನೆ ಮಿಗಿಲೈಸೆ ॥ ಬೇರೇನು ಸಂಶಯ ಬೇಡ ಶ್ರೀಹರಿಚರ । ಣಾರವಿಂದವ ತೊಳೆ ಸಾಕಂ ॥ ೨ ॥ ವ್ಯಾಸನಾರದ ಮೊದಲಾದರ ಬೆಸಗೊಂಬು । ದೀ ಸಮಸ್ತರೊಳಿದನೆನಲು ॥ ಲೇಸನಾಡಿದ ಭೀಷ್ಮನೆನುತೆಲ್ಲ ವ್ಯೋಮದಿ । ಘೋಷದಿಂ ಪೊಗಳಂತಚ್ಯುತನ ॥

ರಾಗ ಬಿಲಹರಿ ಏಕತಾಳ

ಅನಿತರೊಳ್ ಸಹದೇವ ನವರತ್ನಮಯಸಿಂಹಾ । ಸನವ ಭೂಮಿಪರ

ಮಧ್ಯದಲಿ ತಂದಿರಿಸಿ ॥ ವಿನಯದಿಂ ಕೈಗೊಟ್ಟು ಪೀತಾಂಬರನ ದಿವ್ಯಾ । ಸನಕೆ ಕೊಂಡೊಯ್ದು ಕುಳ್ಳಿರಿಸಿ ಭಕ್ತಿಯಲಿ ॥ ೧ ॥ ಮಧುಪರ್ಕಾದಿಗಳಿಂದ ಪೂಜಿಸಿ ವೈದಿಕ । ವಿಧಿಯಿಂದಲಾಗ ಸತ್ಕರಿಸೆ ಮೌನಿಗಳು ॥ ಪದಕೆರಗಲುಂ ಸುರಭೇರಿ ಪೂಮಳೆ ಸಹಿ । ತೊದಗಲಾ ಸಭೆ ಪೊಗಳಿದುದು ಧರ್ಮಜನ ॥ ೨ ॥ ಇಂತು ಸಜ್ಜನರೆಲ್ಲ ನಲಿಯೆ ಪಾಂಡವರತಿ । ಸಂತೋಷಗೊಳುತಿರಲಿನಿತೆಲ್ಲ ನೋಡಿ ॥ ದಂತಿಪುರೀಶಾದಿ ನೃಪರೆಲ್ಲ ಗಜರುತ । ತಂತವೊಮ್ಮೆಳೊಬ್ಬರನೊಬ್ಬರೀಕ್ಷಿಸುತ ॥

ಭಾಮಿನಿ

ಕೆಲರು ಪಾಂಡವಮೈತ್ರಿಯಲಿ ಕೆಲ । ಕೆಲರುಂ ಕೃಷ್ಣನ ಬಲುಹಿನಲಿ ಕೆಲ । ಕೆಲರು ಹರಿಪಕ್ಷದಲಿ ಕೆಲರನುಚಿತದ ಭೀತಿಯಲಿ ॥ ಕೆಲರಿದೇಕೆಮಗೆಂದು ಧರಣೀ । ವಲಯದವನಿಪರಿದ್ದುದದರೊಳು । ಖಳಶಿರೋಮಣಿ ಮಸಗಿದನು ಶಿಶುಪಾಲನಡಿಗಡಿಗೆ ॥ ೧ ॥

ರಾಗ ಮಾರವಿ ಏಕತಾಳ

ಹೊತ್ತಿದುದತಿ ರೋಷಾಗ್ನಿಯೊಳಗೆ ತನು । ಮೃತ್ಯುವೊಲಿದ ತೆರದಿ ॥ ಕೆತ್ತಲುಂ ಮೀಸೆಯೊಳಕ್ಷಿಯೊಳುರಿ ಹೊಗೆ । ದೆತ್ತಿತಲಾರ್ಭಟಿಸಿ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಏನೆಲವೊ ಸಹದೇವ ವಸುಧೆಯು । ಮಾನನಿಧಿಗಳ ಮುಂದೆ ಗೋಪರ । ಸೂನುವಿಗೆ ಪೂಜಾಗ್ರಪೀಠಗ ಳೇನದುಸಿರು ॥ ೧ ॥ ನೀನರಿಯದವ ನಿಮ್ಮ ಯಾಗಕೆ । ಹಾನಿ ಬಂದಿದೆ ನಿಮ್ಮ ಹಿರಿಯರ । ದೇನ ಮಾಡಿದರಕಟಕಟ ಸ್ವ । ರ್ಗಾನುಭವಕೆ ॥ ೨ ॥ ಯದುಗಳಿಗೆ ರಾಜತ್ವವೆಲ್ಲಿಹು । ದದರೊಳೀತನ ಖೋಡಿ ಯನು ಬ । ಲ್ಲುದು ಮಹಾಜನವೀ ಕ್ರತುವ ಕೆಡಿ । ಸಿದಿರಿ ವ್ಯರ್ಥ ॥ ೩ ॥ ಮುದಿ ಬರಡ ಘಡ ಭೀಷ್ಮ ನೀನೆಂ । ತಿದಕೆ ಪಶುಕಾವವನ ಯೋಗ್ಯತೆ । ಗೊದಗಿಸಿದೆಲಾ ನಿನ್ನ ಹಲುಗಳ । ನೊದೆವೆನಿದಕೊ ॥ ೪ ॥ ಸಕಲಶಾಸ್ತ್ರ ಪುರಾಣವೇದ । ಪ್ರಖರವೆನಿಸಿದ ಯಜ್ಞವಿದ ನೀ । ನಕಟ ನೀರೊಳಗೆರೆದೆ ಗೋಪಾ । ಲಕನ ತೋರಿ ॥ ೫ ॥

ಭಾಮಿನಿ

ಭೂತಳಾಧಿಪರಪರಿಮಿತವದೆ । ಈತಗಳು ಬಹುಯೋಗ್ಯರದೆ ವಿ । ಖ್ಯಾತ ವೇದವ್ಯಾಸಗುರುಕೃಪರವರ ನೀನುಳಿದು ॥ ಈತನೇ ಪ್ರಿಯನೆಂದು ಕೃಷ್ಣಂ । ಗೋತು ಕೊಡುವರೆ ಬೇರೆ ಕೊಡುವದು । ಭೂತಳೇಶರ ಮುಂದೆ ಮನ್ನಿಪು ದುಚಿತವಲ್ಲೆಂದ ॥ ೧ ॥

ರಾಗ ಮಾರವಿ ಏಕತಾಳ

ಭೂಮಿಪರೆಂದಾವ್ ಕಪ್ಪವನಿತ್ತೆವು । ಪ್ರೇಮದೊಳದು ಹೊರತು ॥ ಭೀಮಾರ್ಜುನರಬ್ಬರಗಳಿಗಂಜುವ । ರೀ ಮಹಿಯೊಳಗುಂಟೆ ॥ ೧ ॥ ಆದರಂ ಠಕ್ಕಿನ ಗೋವಳಿಗನನಾ । ರಾಧಿಸಿ ಸಭೆಯೊಳಗೆ ॥ ಮೇದಿನಿಪರ ಮಾನವ ಕೊಂಡಿರಿ ಹಾ । ಳಾದುದು ನಿಮ್ಮೊಸಗೆ ॥ ೨ ॥ ಧರ್ಮಕ್ರತು ಸತ್ಯದ ನೃಪ ನೆನಲೀ । ಕರ್ಮವು ದೊರಕಿತಲಾ ॥ ದುರ್ಮತಿಗಳು ನೀವೆನುತ ಮುರಾಂತಕ । ಸಮ್ಮುಖವನು ನೋಡಿ ॥ ೩ ॥

ರಾಗ ಭೈರವಿ ಏಕತಾಳ

ತುರುಗಾವನೆ ಕೇಳ್ ಪರಿಯು । ತಾ । ನರಿಯದೆ ಮುಂದಿ ಗಾಂಗೇಯಂ ॥ ಕರೆದೆಡೆಯೀಸ್ಥಾನದೊಳು । ಬಂ । ದಿರಲಾರೆಲೊ ನೀ ಪೇಳಂ ॥ ೧ ॥ ಜನಪನೊ ನೀ ನಾಯಕನೊ । ನವಂ । ಗೆಣೆಯೆನಿಪನೊ ಸಾಯಕನೊ ॥ ಬಣಗರಂ ದ್ವಿಜಮುಂಷಿವರರು । ಭೋ । ಜನದಕ್ಷಿಣೆಗೊದಗಿಹರು ॥ ೨ ॥ ಅಂಥವರಾವಲ್ಲೆಲವೊ । ಬಲು । ಪಂಥಭಿಮಾನಿಗಳಾವೊ ॥ ಎಂತೊದಗಿದೆ ಬಿಡೆವೆನಲಂ । ಆ । ದಂತವಕ್ತ್ರನು ಕೋಪದೊಳು ॥ ೩ ॥ ಅರಿಯದೆ ಕರೆದಡೆ ಮುನ್ನ । ನೀ । ನರಿಯಲು ಬೇಡವೆ ನಿನ್ನ ॥ ಕೊರತೆಯು ಸೀ ಮರೆಸಿಡಲಿ । ಜಗ । ವರಿಯದೆ ನಿನ್ನನು ಪೇಳು ॥ ೪ ॥ ಕುಲವೇ ಯದುಕುಲಮನೆಯು । ಕಡ । ಲೊಳಗೈಸಲೆ ಭುಜಸಿರಿಯು ॥ ಕಳನೊಳಗೋಡಿದ ಖುಲ್ಲ । ಎನ । ಲುಲಿಯುತ ಯಾದವರೆಲ್ಲ ॥

ಭಾಮಿನಿ

ಸೀಳಿ ಹೆಡತಲೆಯಿಂದ ತೆಗೆವೆವು । ನಾಲಗೆಯನೆಲೆ ಕುನ್ನಿಗಳಿರಾ । ಕೇಳು ವರೆ ಹರಿನಿಂದೆಯಿಂದಂ ಪಾತಕಕೆ ಗುರುವೆಯಲಾ ॥ ಏಳೆನುತ ತವಂತಮಗೆ ಸಾಂಬ ನೃ । ಪಾಲ ಸಾತ್ಯಕಿ ಮುಖ್ಯ ಯಾದವ । ಜಾಲವೆದ್ದುದು ಬಿಗಿದ ಬಿಲುಗಳ ಸೆಳೆದಡಾಯುಧದಿ ॥ ೧ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಕದಡಿತಾ ನೃಪರ ಸಂಕುಲಗಳು । ಆನೆ । ಕುದುರೆ ಪದಾತಿ ಮುಂದ್ವರಿಯಲು ॥ ಬೆದರಿ ಸಜ್ಜನರೆಲ್ಲ ನಡುಗಲು । ಭೀಮ । ನೊದಗಿ ಭೂಮಿಪರ ಸಂತವಿಸಲು ॥ ೧ ॥ ಮುಂದ್ವರಿಯಂತ ಸಹದೇವನಂ । ಹರಿ । ನಿಂದೆಯಂ ಮಾಳ್ಪತಿಖಳರನು ॥ ಕೊಂದೊರಗಿಸದಿರೆವೆನ್ನೊಳು । ಬನ್ನಿ । ರೆಂದವನೀಪರಿ ಜರೆಯಲು ॥ ೨ ॥ ಶಿಶುಪಾಲ ಖಳದಂತವಕ್ತ್ರರಂ । ಸಹಿ । ತಸುರರಾರ್ಭಟಿಸುತೆದ್ದರನಿಬರು ॥ ಮಸಗುತ ನಡೆತರೆ ಯುವಂಜನಂ । ತಡೆ । ದುಸಿರಿದ ನೀತಿಮಾರ್ಗ

ಗಳಸು ॥ ೩ ॥ ಪರಮಾತ್ಮನಿವನೆಂದು ಸಭೆಯೊಳು । ಜನ । ರರಿತಿಹುದೀ ಮಹಾಸಭೆಯೊಳಂ ॥ ಮರುಳಾಟ ಸಾಕು ಬಾರೆನ್ನುತ । ಮುಂ । ಜೆರಗನು ಹಿಡಿದೊಡಂಬಡಿಸುತ್ತ ॥ ೪ ॥ ಕೇಳದೆ ಗಜರಲು ಸಭೆಗಳು । ಭೀಷ್ಮ । ಪೇಳಿದ ನೀ ಜಗನ್ಮಯನೊಳಂ ॥ ಖೂಳನಾಯ್ಗಳು ಪಾಡೆ ಕೃಷ್ಣನ । ಘನ । ಲೀಲೆಯು ಪೇಳ್ವೆ ಕೇಳುವುದಿನ್ನ ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಪ್ರಳಯದೊಳೊಬ್ಬನೆ ಮಲಗಿರೆ ಕರ್ಣದಿಂ । ದಲಿ ಮಧುಕೈಟಭರು ॥ ಬಲವಂತರುದಿಸಿ ಕಾಳಗವಾಗೆ ಸೀಳ್ದು ಭೂ । ತಳವ ನಿರ್ಮಿಸಿದನಲ್ಲೈ ॥ ೧ ॥ ವೇದವ ಸಲಹಿದು ಮಥನದೊಳಮರರ । ಕಾಯ್ದ ಮೃತವ ಪಾಲಿಸಿ ॥ ಮೇದಿನಿಯೊಯ್ದನ ಮುರಿದು ಭೂಮಿಯು ತಂದ । ಯಾದವನೀತ ಕಾಣೈ ॥ ೨ ॥ ಶಿಶು ಪ್ರಹ್ಲಾದನಿಗೊಲಿದು ಹಿರಣ್ಯನ । ಬಸಿರನು ಬಗಿದನಲ್ಲೈ ॥ ವಸುಧೆಯುನಳೆದು ವಾಮನನಾಗಿ ಬಲಿಯನು । ದೆಸೆಗೆಡಿಸಿದನೀತನು ॥ ೩ ॥ ಕೊಡಲಿಯ ಪಿಡಿದು ಕ್ಷತ್ರಿಯರ ಗೆಲ್ದವನೊಳು । ತೊಡಕದಿರಕಟಕಟ ॥ ಕಡಲ ಬಂಧಿಸಿ ದಶವದನ ಮುಖ್ಯರ ತಲೆ । ಗಡಿದಾತನೀತ ಕಾಣೈ ॥ ೪ ॥ ದೇವಕಿಸುತನಾಗಿ ಬಾಲಕೇಳಿಯೊಳಸು । ರಾವಳಿಗಳ ತರಿದಂ ॥ ಮಾವಕಂಸನನು ಕೊಂದಿಳುಹಿದ ಬಾಣನ । ಸಾವಿರ ತೋಳುಗಳ ॥ ೫ ॥ ನಿನ್ನಂಥ ದೈತ್ಯರು ಹಲಬರು ಮಡಿದುದ । ಕಣ್ಣಾರೆ ನೋಡಿ ನೀನು ॥ ಚಿನ್ಮಯನೊಡನೆ ನೀ ಸೆಣಸುವ ಸಂಗತಿ । ಗಿನ್ನೇನನೆಂಬೆ ನಾನು ॥ ೬ ॥ ಇಂತೆಂಬ ನೀತಿಯ ಕೇಳದೆ ನೃಪರು ತ । ಮ್ಮಂತರಂಗದಿ ಯೋಚಿಸಿ ॥ ನಿಂತರಾಯುಧಗಳ ಧರಿಸಿ ತೇರಾನೆ ಮ । ಹಾಂತ ಸೈನಿಕ ಸಹಿತ ॥

ಭಾಮಿನಿ

ಕರೆಸಿದನು ಖೂಳರನು ನೀತಿಯ । ಗರುವರನು ನೂಕಿದರು ರಾಯನ । ಪರಮ ಯಾಗವನಳಿಯಲೆಂದನುವಾಯ್ತು ನೃಪಕಟಕ ॥ ಕರಿತುರಗ ರಥ ಸೈನ್ಯ ಸಹಿತಲಿ । ನರವೃಕೋದರರಿತ್ತ ವೊಳಗಲಿ । ಕರಸ ಭೀಷ್ಮಂಗೆಂದ ಮೂಗಿನ ಬೆರಳ ಚಿಂತೆಯಲಿ ॥ ೧ ॥

ರಾಗ ನೀಲಾಂಬರಿ ಆದಿತಾಳ

ಭೀಷ್ಮ ಲಾಲಿಸೆಮ್ಮ ಮನ । ದಿಷ್ಟವೆಂಬೀ ಕ್ರತುವ । ದುಷ್ಟಾತ್ಮರೀ ಜನರು ಕೂಡಿ । ನಷ್ಟಗೆಯ್ವರಲ್ಲ ॥ ೧ ॥ ನೀತಿಗಳನುಳಿದೆಮ್ಮ ಶ್ರೀ । ನಾಥನಾ ನಿಂದಿಸುವ ॥ ಮಾತ ಕೇಳಿ ಸೈರಿಸಿ ಬಾಳ್ವ । ರೀತಿಯ ನಾ ಕಾಣೆ ॥ ೨ ॥ ಈ ಸಮಸ್ತರಿದಿರು ಕ್ರತು ಪೂ । ರಯ್ಸುವಂದ ಕಾಣೆ ॥ ಈಸು ಪಾಪಿಗಳಿಂದ ಪರಿ ।

ಹಾಸವಾದುದಲ್ಲೈ ॥ ೩ ॥ ಯಾರೆಜ್ಞವನಳಿದೆನೋ ಮೇ । ಣಾರ ನಿಂದಿಸಿದೆನೊ ॥ ಯಾರಿಗೊರೆವೆ ಗತಿಯೇನಕಟೆಂ । ದೀರೀತಿಯೊರಲ್ದ ॥ ೪ ॥

ರಾಗ ಸೌರಾಷ್ಟ್ರ ಅಷ್ಟತಾಳ

ಅಂಜದಿರಧವುನಾಯಿಗಳೆಂದ ಮಾತಿಗೆ । ಕಂದ ಕೇಳುಂ ॥ ಹುಂಲುಂ । ಜಂಜಡತ್ವಕೆ ನೀನು ಜರುಗಿದ್ಯೆ ಮನವನು । ಕಂದ ಕೇಳು ॥ ೧ ॥ ಕಂಜಲೋಚನ ಖಳರಿವದಿರ ಬಗೆವನೆ । ಕಂದ ಕೇಳು ॥ ಭವ । ಭಂಜನಕೃಪೆ ನಿನಗತಿಶಯುವಾಗಿದೆ । ಕಂದ ಕೇಳುಂ ॥ ೨ ॥ ಹಗರಣಕೊದಗದಿರಲು ಮೂರುಂ ಲೋಕವ । ಕಂದ ಕೇಳು ॥ ತಾನೆ । ತೆಗೆವ ಹೂಡುವ ಜಗನ್ಮಯನೀ ಮುಕುಂದನು । ಕಂದ ಕೇಳು ॥ ೩ ॥ ವಿಗಡ ಚೈದ್ಯಾದಿ ನಾಯುಕರನೀಕ್ಷಣದೊಳು । ಕಂದ ಕೇಳು ॥ ಕೊಂದು । ಬಗಿದು ಭೂತಾಹುತಿ ಕೊಡದಿರ ಸೈರಿಸು । ಕಂದ ಕೇಳು ॥ ೪ ॥ ಕಡಲುಂ ಮುಂಜಿನ ಮಳೆಗಳುಕಿ ಪೋಗುವುದುಂಟೆ । ಕಂದ ಕೇಳು ॥ ಇಂಥಾ । ಒಡಿವಾರಗಳಿಗಂಜಿ ನಡುಗುವ ಕೃಷ್ಣನೆ । ಕಂದ ಕೇಳು ॥ ೫ ॥ ಬಿಡಂ ಬಿಡೀ ಶೋಕವನೆಂದೊಡಂಬಡಿಸಲು । ಅರಸ ಕೇಳು ॥ ಕೇಳ್ದು । ಘುಡುಂಘುಡಿಸಂತ ದಂತವಕ್ತ್ರನು ಪೇಳ್ದನು । ಭೂಪ ಕೇಳು ॥ ೬ ॥

ರಾಗ ಕಾಂಭೋಜಿ ಝಂಪೆತಾಳ

ಎಲೆ ಭೀಷ್ಮ ಭಂಡ ಮುಂದಿಬರಡ ಫಡ ನಿನ್ನ ಗೋ । ಕುಲದವನ ಗುಣವ ಬೇಸರದೆ ॥ ಗಳಹುತಿಹೆ ಜಾರೆಯುರ ಮಿಂಡನೀತನ ಕಥೆಯು । ಕಲಿಸಿದವರಾರಕಟ ನಿನಗೆ ॥ ೧ ॥ ಭೀಷ್ಮನಿವನಧಮ ಚಂಡಾಲನನು ಬಿಡದೆ ಕಡಿ । ದೊಟ್ಟದಿರೆನೆನುತ ನಡೆತರಲು ॥ ಸಿಟ್ಟಿನಲಿ ಪಲ್ಗಡಿದು ಭೀಮು ರೋಷಾಗ್ನಿಯುಲಿ । ದುಷ್ಟಾತ್ಮಗೆಂದ ಕಡುಮುಳಿದು ॥ ೨ ॥ ಎಲವೊ ನೀಚಾಧಮಂ ಪಿಶಾಚಿ ದೈವದ್ರೋಹಿ । ತಿಳಿದುಕೋ ನಿನ್ನೊಡಲ ಬಗಿದು ॥ ಬಲು ಭೂತ ಸಂತಾನಕುಣಬಡಿಸಿ ಮಿಕ್ಕವರ । ತಲೆಯಂ ಕೊಂಬೆನು ಸೈರಿಸಿನ್ನು ॥ ೩ ॥ ಹರಿಯು ನಿಂದಿಸಿ ಭೀಷ್ಮರನು ಜರೆದ ಫಲವ ನಿನ । ಗರೆ ನಿಮಿಷದೊಳಗೆ ತೋರುವೆನಂ ॥ ಪರಿಕಿಸೆಂದನುವಾಗಲಖಿಳ ಯಾದವರು ಸಹಿ । ತರಸಸೈನಿಕವೆದ್ದುದಾಗ ॥ ೪ ॥ ಬಲಪಯೋದಧಿ ಸಹಿತ ಕಯ್ಯ್ಕ ಗದೆಯುಂನಂ ಭೀಮು । ಝಳಪಿಸಂತ ಬರಲಿದಿರುಹಾಯ್ದು ॥ ಕಳಕಳವ ಮಾಣಿಸುತ ಭೀಷ್ಮ ಭೀಮುನ ಗದೆಯು । ಸೆಳಕೊಂಡು ನುಡಿದನತಿ ದಯದಿ ॥ ೫ ॥

ಭಾಮಿನಿ

ನೆರಹಿದಿರಿ ಚತುರಾಬ್ಧಿಮಧ್ಯದ । ಧರಣಿಪಾಲಸಮುಂದ್ರದೊಳಗೀ । ಪರಿಯ

ಮಾಡಿದರಕಟ ಕೆಡದೇ ರಾಜಸೂಯಂಮುಖ ॥ ಧರಧುರವು ಸಾಕೆಂದು ಹೂಣಿಗ। ರಂರುಬೆಗಳ ನಿಲಿಸಿದನು ಗಜಬಜಿ । ಪರಸುಗಳ ಸಂತವಿಸಲೀಕ್ಷಿಸುತೆಂದನಾ ಚೈದ್ಯ ॥ ೧ ॥

ರಾಗ ಮಾರವಿ ಏಕತಾಳ

ಬಿಡು ಬಿಡುಂ ಗಂಗಾಸುತ ಕೇಳ್ ಭೀಮಂನ । ತಡೆಗಡಿದೀಕ್ಷಣದಿ ॥ ಬಿಡದಗ್ನಿಗೆ ಪೂರ್ಣಾಹುತಿಯೊಳಗುಣ । ಬಡಿಸುವೆನತಿ ಗುಣದಿ ॥ ೧ ॥ ದೀಕ್ಷಿತ ಯಂಮುಜನ ಕರುಳ ತೆಗೆದು ಜಯ । ಲಕ್ಷ್ಮಿಗೆ ಮಂಡಿಸುವೆನು ॥ ದಕ್ಷಾಧ್ವರದೀಶ್ವರನನು ಮರೆಸುವೆ । ನೀಕ್ಷಣದೊಳಗೆನಲು ॥ ೨ ॥ ಮರುತಜ ಗಜರುತ ಬಿಡು ಬಿಡು ದರ್ಪ । ಜ್ವರದಲಿ ಕಳವಳಿಪ ॥ ದುರುಳಗೆ ದಿವ್ಯಾಸೌಷಧವನು ಬಾ । ಯ್ಗೆರೆವೆನು ನಿಮಿಷದಲಿ ॥ ೩ ॥ ಸಮ್ಮನು ಗೆಲಿದಾ ದಕ್ಷಾಧ್ವರಹರ । ನಿಮ್ಮಗಿಲೆನಿಸುವನ ॥ ಹೆಮ್ಮೆಯ ಕೊಂಬೆನೆನುತಲಡಹಾಯ್ದಾ । ದುರ್ಮತಿಗಿದಿರಾದ ॥ ೪ ॥

ರಾಗ ದೇಶಿ ಮಟ್ಟೆತಾಳ

ಎಲವೊ ನಿನ್ನಯ । ತಲೆಯ ಕೊಂಬೆನು । ನಿಲುವುದಾದರೆನುತಲಿಟ್ಟ । ನಲಗು ಗದೆಯೊಳು ॥ ೧ ॥ ಧಡಿಗ ದಾನವ । ತಡೆದು ಗದೆಯನು । ಜಡಿದು ಭೀಮಸೇನಗಿಟ್ಟ । ನೊಡನೆ ಮುಷ್ಟಿಯ ॥ ೨ ॥ ಮರುತಸಂಭವ । ನಿರದೆ ಚೈದ್ಯನ । ಉರಕೆ ತಿವಿಯಲಾತನಿವನ । ಶಿರಕೆ ತಾಗಲು ॥ ೩ ॥ ಕುಂದದಿಬ್ಬರು । ಕಾದುವಿನಿತಕೆ । ವಂದುಗೆಟ್ಟುದವನಿ ತ್ರಿಜಗ । ವೃಂದ ನಡುಗಿತು ॥ ೪ ॥ ಗೆಲವು ಭೀಮಗೆ । ಘಟಿಸದೆಬುದ । ತಿಳಿದು ಭೀಷ್ಮ ಪವನಸುತನ । ನಿಲಿಸುತೆಂದನು ॥ ೫ ॥

ರಾಗ ಪುತುವರಾಳಿ ಅಷ್ಟತಾಳ

ಕೇಳಿ ಸೈರಿಸಬೇಹುದೀ ಕಥೆಯ । ಪೇಳುವೆ ಶಿಶುಪಾಲ ಮೂಲಸಂಗತಿಯ ॥ ಕೇಳಿ ॥ ಪ ॥ ಇವ ಹಿರಣ್ಯಾಕ್ಷನು ಮರುಭವದೊಳಗುದು । ಭವಿಸಿದ ರಾವಣ ನೆರೆಶಿಶುಪಾಲನೆಂ । ದವತರಿಸಲು ಬಾಳದೀ । ನೇತ್ರಗಳಾಗು । ತಿವನು ಚತುರ್ಭುಜದಿ । ಪುಟ್ಟುತ ಕೂಗ । ಲವರೆಲ್ಲರತಿ ಭಯದಿ । ಚಿಂತಿಸಲು ಮು । ತ್ತ್ರಪರ ಸಂತಯಿಸಲಯ್ದಿ । ನಾರದಮುನಿ । ಇವನ ಕಯ್ಯೊಳು ತಾನು ವಿವರಿಸಿ ಪೇಳ್ದನು ॥ ಕೇಳಿ ॥ ೧ ॥ ಕಾಣಬಂದರಿಗಿತ್ತಡಧಿಕಕ್ಷಿಬಾಹುಗಳ್ । ಮಾಣಲಿಕವನಿಗಾತನೆ ಶತ್ರುವೆಂದು ಗೀ । ರ್ವಾಣಮುನಿಯು ಪೋಗಲು । ಬಂದವರಿಗೆ । ಕಾಣಿಸೆ ಕೈಕಂಗಳು । ಪೋಗದಿರಲ್ಕೆ । ತಾನೊಂದು ದಿವಸದೊಳು । ಕೃಷ್ಣನು ಬರೆ । ಸೂನುವ ತಂದೀಯಲು । ಕೈಕಂಗಳು । ಕಾಣದಿರಲು ಕಾಂತೆ ಕರುಣಿಸೆಂದೆರಗಲು ॥ ಕೇಳಿ ॥ ೨ ॥

ಭಾಮಿನಿ

ಸೈರಿಸುವೆನಪರಾಧಶತಕಕೆ ಕಂ । ಸಾರನನು ಕೊಲೆನೆನುತಲಾಕೆಗೆ । ಶೌರಿ ಭಾಷೆಯಂ ಕೊಟ್ಟು ಹಿಂಗಿದನವನ ತಾಯೊಡನೆ ॥ ಆರಿವನ ಮರಣಕ್ಕೆ ಮೊದಲಂ ಮು । ರಾರಿಯೋ ನೀನೋ ವಿಚಾರಿಸು । ವೀರ ಮಾರುತಿಯೆಂದೆನಲಂ ಕೇಳಿದನಂ ಶಿಶುಪಾಲ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಏನೆಲವೊ ಕೃಷ್ಣ ಕೊಲುವ ಭಟನು ನೀನೆಲಾ । ನಾನು ನಿನ್ನೊಳಳಿವ ಭಟನೆ ಮರುಳೆ ಪೇಳೆಲಾ ॥ ಈ ನೆಗಳ್ದ ಮಾತು ದಿಟವೊ ಪುಸಿಯೊ ಎಂಬುದ । ಕಾಣಬೇಕಂ ನಿಲ್ಲು ಧುರಕೆ ನೋಡಬಹುದಿದ ॥ ೧ ॥ ಮುಗುಳೆ ಸೋವಂದತ್ತನೆದ್ದು ಗಜರಿ ಗೊಲ್ಲನ । ಪೊಗಳಿ ನೃಪರ ಮಾನಗಳನು ಕೊಂಡ ಭೀಷ್ಮನ ॥ ಬಗಿದು ನೃಪನ ಯಜ್ಞಗಳನು ಕಡಿಶಿರೆನ್ನುತ । ವಿಗಡಜನಕೆ ನೇಮಿಸಲ್ಕೆ ಭೀಷ್ಮ ಗಜರುತ ॥

ಭಾಮಿನಿ

ಬರಿಯ ಮಾತನು ಮೆರೆದು ಕಾರ್ಯಕೆ । ಕೊರತೆಯಾದರೆ ನಾಯ್ಗಳೊದರಿದ । ತೆರನಹುದಲ್ಲೆ ತೋರಿರೈ ನೆರೆ ನಿಮ್ಮ ಕೈಗುಣವ ॥ ಇರಿದು ನೀವ್ ಕೊಲಲಾರದಿದ್ದರೆ । ವರಕ್ರತುವ ನೀವ್ ಕೆಡಿಸದಿದ್ದರೆ । ಕೆರವು ನಿಮ್ಮಯ ಬಾಯೊಳೆಂದನು ಭೂಪರಿಗೆ ಭೀಷ್ಮ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಆ ನುಡಿಗೆ ಭಗದತ್ತ ಪ್ರಳಯ ಕೃ । ಶಾನುವಿನ ತೆರನಂತೆ ಕಿಡಿಯಿಡು । ತಾನನದಿ ಹೊಗೆ ಸೂಸುತೆಂದ ಕೃ । ಪಾನಿಧಿಯೊಳು ॥ ೧ ॥ ಎಲವೊ ಸೈರಿಸಿಕೊಂಡರೀಪರಿ । ಸಲುಗೆಯಾಯಿತೆ ಪೇಳು ನೀ[illegible] । ರೆ[illegible] ಪೀತವ । ಸಿಳಿವುದಿನ್ನು ॥ ೨ ॥ ಜ[illegible] ಹಾರುವರು ಪತಿಕರಿಸಿದರೆ ನೀ । ನಾ[illegible] ಮಾ[illegible]ಯೆನಲು ಚೈದ್ಯ ಮು[illegible] ರಾರಿಗೆಂದ ॥ ೩ ॥ ನಿನಗೆ ಮೊದಲಲಿ ದಿವ್ಯ ವಿಶಿಖದ । ಮೊನೆಯೊಳರ್ಚಿಸಿ ಬಳಿಕ ಭೀಷ್ಮನ । ಘನತರಾಗ್ನಿಯೊಳುರುಹಿ ಕುಂತೀ । ತನಯರುಗಳ ॥ ೪ ॥ ತನಿರಕುತಘೃತಧಾರೆಯೊಳಗೀ । ವಿನುತ ರೋಷಾಧ್ವರವ ವಿರಚಿಪೆ । ನೆನುತ ಕೃಷ್ಣನ ಪಿಡಿದೆಳೆದರಾ । ಕ್ಷಣದಿ ಬಿಡದೆ ॥ ೫ ॥ ಇಂದಿನಲಿ ರಿಪುರುಧಿರಪಾನಾ । ನಂದವತಿ ಶಾಕಿನಿಗಳೆನಿಪಾ । ನಂದಲೀಲಾ ನೃತ್ಯದರುಶನ । ವೆಂದು ನೃಪರು ॥ ॥ ೬ ॥ ಧುಸಿ ಶಸ್ತ್ರಾಸ್ತ್ರಗಳನಾ ಚ । ಪ್ಪರವ ಹೊರವಂಟಖಿಳ ರಾಯರುಂ । ನೆರೆದರಾ ಗೋಕುಲನಿವಾಸನ । ಕರೆಯಿರೆನುತ ॥ ೭ ॥

ರಾಗ ಆಹೇರಿ ಝಂಪೆತಾಳ

ಧುರಕೆ ಸನ್ನಹವಾದರಾಗ । ನಾಲ್ಕು ಸಾ । ಗರಮಧ್ಯದವನಿಪಾಲಕರಧಿಕ ಬೇಗ ॥ ಧುರಕೆ ॥ ಪ ॥ ಡಾವರಿಸಿತಖಿಳ ನಾ । ನಾ ವಾದ್ಯಘೋಷ ಭುವ । ನಾವಳಿಯ ತುಂಬಿ ಸುಭ । ಟಾವಳಿಗಳತಿಕರಿ ಘ । ಟಾವಳಿಪದಾತಿ ಸೇ । ನಾವಳಿಗಳೆದ್ದು ದಾ । ದೇವ ಗಡ ಬರಹೇಳುತ । ಕಾವವರ । ಗೋವಳನ ಹುಡುಗನನು ತೋರಿರೆಂದೆನುತ ॥ ಧುರಕೆ ॥ ೧ ॥ ಓಡಿದರು ಭೂಸುರರು । ಬಾಡಿದರು ಮುನಿಗಳ । ಲ್ಲಾಡಿತಾ ಸಭೆಯಧಿಕ । ಕೇಡು ಸಂಭವಿಸಿತೆನು । ತಾಡಿ ಚಿಂತಿಸುತಿತ್ತ । ಜೋಡಿಸಿದ ಸೈನ್ಯದೊಳ । ಗೌಡುಗಿವುತಾಗ ಭೀಮ । ರೋಷ ಮನ। ಮಾಡಿ ನಿಂತಿರೆ ನುಡಿದ ಶ್ರೀರಂಗಧಾಮು ॥ ಧುರಕೆ ॥ ೨ ॥

ರಾಗ ವೃಂದಾವನ ತ್ರಿವುಡೆತಾಳ

ಇಂದೆಮ್ಮ ಮಾತ ಕೇಳಿ । ಸಕಲ ಮುನಿ । ವೃಂದವಂಜದಿರಿ ತಾಳಿ । ಸೈರಿಸಿ ಪಾಂಡು । ನಂದನರಿಂದಿನಲಿ । ಪೇಳುವೆನು ಕೇಳಿ ॥ ಅಂದಿನಲಿ ಶಿಶುಪಾಲಕನ ತಾಯ್ । ಬಂದು ಮಗನಪರಾಧ ಶತದಲಿ । ಕಂದಲಾಗದು ಚಿತ್ತವೆಂದಳು । ಚಂದ ಮಿಗಲುಪಚರಿಸಿ ನಮ್ಮನು ॥ ಇಂದೆಮ್ಮ ॥ ೧ ॥ ಆಮಾತಿನೊಳಗೀತಗೆ । ಸೈರಿಸಿದೆ ನಾ । ನೀ ಮಹಾ ಸಭೆಯೊಳಗೆ । ಸಂದುದು ಭಾಷೆ । ಕಾಮುಕತ್ವದೊಳೆನಗೆ । ಬೈವುತ ಕಡೆಗೆ ॥ ಈ ಮಹಾ ಯಜ್ಞವನು ಕೆಡಿಸುವೆ । ನೀ ಮಹೀಶರ ಮುರಿವೆನೆಂದತಿ । ವೈಮನಸ್ಯವ ಮಸೆದು ಖೂಳನು । ತಾ ಮನವ ಮಾಡಿದ ವಿನಾಶಕೆ ॥ ಇಂದೆಮ್ಮ ॥ ೨ ॥ ದುಷ್ಟನ ತಲೆಗಡಿದು । ಭೂತಳವ ಸಂ । ತುಷ್ಟಿಯ ಪಡಿಸುತಲಿಂದು । ಯಾಗವ ಕಾಯ್ದು । ಕೊಟ್ಟಪೆ ನಿಮಿಷಕೆಂದು । ತಾ ನಿಜಸಿಂಹ ॥ ವಿಷ್ಟರವನಿಳಿದೊಡನೆ ನಗುತಲಿ । ಕೃಷ್ಣ ದಿವ್ಯಾಸ್ತ್ರವನು ಕೈಗೊಳು । ವಷ್ಟರೊಳು ಯದುಸೇನೆ ಪಾಂಡವ । ಸೃಷ್ಟಿಪಾಲರ ಬಲಗಳೊದಗಿತು ॥ ಇಂದೆಮ್ಮ ॥ ೩ ॥

ಕಂದ

ದೈತ್ಯರ ತತಿಯುಂ ಕನಲಿ ರ । ಣೋತ್ಸಹಕುದ್ಯುಕ್ತರಾಗೆ ಕಾಣುತ ಮುಂದದಿಂ ॥ ಹತ್ತಿರೆ ಬಹ ಹರಿಯಂ ಕಾ । ಣುತ್ತಲಿ ಭಗದತ್ತ ನುಡಿದ ಹರಿಯೊಳ್ ಭರದಿಂ ॥ ೧ ॥

ರಾಗ ಕಾಂಭೋಜಿ ಏಕತಾಳ

ನಿಲ್ಲು ನಿಲ್ಲೆಲೊ । ಸಂಗರಕತ್ತ । ಗೋವಳ ಕೃಷ್ಣ । ನಿಲ್ಲು ನಿಲ್ಲೆಲೊ ॥ ಪ ॥ ವೆಲ್ಲನಯ್ದು ಗೋಪಸ್ತ್ರೀಯು । ರೆಲ್ಲರನ್ನು ವಂಚಿಸಿ ॥ ಅಲ್ಲಿ ಪಾಲು ಬೆಣ್ಣೆ

ತಿಂದು । ಕಲ್ಲಿ ಕೊಳ ಭುಂಜಿಸಿ ॥ ನಲ್ಲೆಯರ ಕುಚವ ಪಿಡಿವು । ತುಲ್ಲಿಸದೊಳು ಮೋಹಿಸಿ ॥ ನಿಲ್ಲದೆ ಜುಣುಗಿದ ಚೋರ । ಕಳ್ಳತನದಿ ಸಾಹಸಿ ॥ ೧ ॥ ನಮ್ಮೊಳ ಗಂತಿಂಥಾದೊಂದು । ನಡೆಯುದೆಲವೊ ಗೋವಳ ॥ ಸಮ್ಮುಖವಾಗುತ್ತ ನಿಲ್ಲು । ಕಾಮರ್ಯಗ ಕಯ್ಯೊಳ್ಳೆಲಾ ॥ ಹೆಮ್ಮೆಯಿಂದೀರೀತಿ ಬಂದು । ಸಿಂಹಾಸನವ ನೇರ್ದೆಲಾ ॥ ಹಮ್ಮನೆಲ್ಲ ತೋರು ತೋರು । ಸುಮ್ಮಗಿರುವದೇಕೆಲಾ ॥ ನಿಲ್ಲು ॥

ರಾಗ ಶಂಕರಾಭರಣ ಮಟ್ಟೆತಾಳ

ಎಂದೆನಲ್ಕೆ ನಗುತಲಮರವಂದ್ಯನುಸಿರಿದ । ಮಂದಮತಿಯೆ ಕೇಳು ನಿನ್ನ ತಂದೆ ಬಹುವಿಧ ॥ ದಿಂದ ಬಗುಳಿ ಯುಮುನ ಪುರಕೆ ಸಂದ ತೆರದಲಿ । ಬಂದು ದಿದಕೊ ನಿನಗೆ ಮರಣವಿಂದು ತನ್ನಲಿ ॥ ೧ ॥ ಪರಿಕಿಸೆನುತ ಬಿಟ್ಟ ಸರಳ ತರಿದು ಮಾನುಷ । ತುರುವ ಕಾಯ್ದು ಲಂಡ ನಿನಗಿದೇಕೆ ಪೌರುಷ ॥ ಬರಿದೆ ಘಡ ಘಡೆ ನುತ ಬಿಟ್ಟ ಸರಳ ತುಂಡಿಸಿ । ದುರುಳ ಸೂತ ತುರಗ ತೇರು ಧನುವ ಖಂಡಿಸಿ ॥ ೨ ॥ ಮಾನಭಂಗವೆಸಗಲಸುರ ಪ್ರಾಣಮಾತ್ರದಿ । ತಾನು ಜುಣುಗಲಿತ್ತ ಸೋಮದತ್ತ ಶೌರ್ಯದಿ ॥ ದಾನವಾರಿಯೊಡನೆ ಸೆಣಸಿ ಸೋತು ಮೌನದಿ । ಸೇನೆಸಹಿತ ತಿರುಗಿ ಪೋದನಸಮ ಸಮರದಿ ॥ ೩ ॥

ರಾಗ ಪಂಚಾಗತಿ ಮಟ್ಟೆತಾಳ

ಮುರವಿರೋಧಿಯಿಂತು ಧುರಕೆ । ಕೆರಳಿ ಬರುವ ಪರಿಯ ಕಂಡು । ಧರಣಿ ಪಾಲನಿಕರ ಮುಂದು । ವರಿದು ಗರ್ಜಿಸಿ ॥ ಸರಳಸಾರದಿಂದ ಮುಸುಕ । ಲರು ತರಾಸ್ತ್ರದಿಂದ ಗೆಲ್ದು । ಹರಿಯು ನೋಡುತಿಂದ್ರಸೇನ । ತರುಬಿ ನಿಲ್ಲಲು ॥ ೧ ॥ ಆ ನೃಪಾಲ ಸೈನ್ಯಸಹಿತ । ಹಾನಿಯಾಗಿ ತಿರುಗೆ ರೋಚ । ಮಾನ ಪಾಂಡು ನೃಪಸಮುದ್ರ । ಸೇನರೆಂಬರು ॥ ದಾನವಾರಿಯೊಡನೆ ಸೆಣಸಿ । ಸೇನೆಸಹಿತ ನೃಪಸಮೂಹ । ಮಾನಭಂಗರಾಗಿ ಪೋದ । ರೇನನೆಂಬೆನು ॥ ೨ ॥ ದಂತಿವರ ಪದಾತಿನೃಪರ । ಸಂತತಿಗಳು ಸೋತು ನಿಜಪು । ರಾಂತಿಕಕ್ಕೆ ತಿರುಗುತಿರೆ ಕೃ । ತಾಂತನಂದದಿ ॥ ದಂತವಕ್ತ್ರ ಕೆರಳಿ ಖಳಮು । ಹಾಂತ ಸೈನ್ಯ ಸಹಿತಲಯ್ದಿ । ಕಂತುಪಿತನಿಗೆಂದ ಕರದಿ । ಕುಂತ ತಿರುಹುತ ॥ ೩ ॥ ಚೋರ ಘಡ ಘಡೆಲವೊ ರಣವಿ । ಚಾರವೇನ ಬಲ್ಲೆ ಗೋಕು । ಲೂರ ಜಾರೆಯರ ಮನೋವಿ । ಚಾರ ವಲ್ಲದೆ ॥ ಭೂರಿಸಭೆಗೆ ಯೋಗ್ಯನೆಂದು । ಚಾರುಸಿಂಹ ಪೀಠವಿದರ । ನೇರ ಬಂದ ಬಲುಹ ತೋರು । ತೋರೆನುತ್ತಲಿ ॥ ೪ ॥ ಬಲುತರಾಸ್ತ್ರ ಸುರಿಯೆ ತರಿದು । ಜಲಜನಾಭನೆಂದನಸುರ । ಕಲಿಕೆ ತಾನು ಮೃತ್ಯುವೆಂದು । ತಿಳಿಯು

ದಾದೆಲಾ ॥ ಎಲವೊ ನಿನ್ನ ಸಿಗಿದು ಭೂತ । ಗಳಿಗೆ ನಿಮಿಷದಿಂದ ತೃಪ್ತಿ । ಗೊಳಿಸದಿರೆನೆನುತ್ತ ಸರಳ । ಮಳೆಯ ಸುರಿಯಲಂ ॥ ೫ ॥

ವಾರ್ಧಿಕ

ಅಚ್ಯುತನ ಬಾಣವಂ ತರಿದೊಡನೆ ದಾನವಂ । ಮುಚ್ಚಿದಂ ಮುರಹರನ ಮಗುಳೆ ಕೋಪಿಸುತವನ । ನೆಚ್ಚಡಾ ಹರಿಶರಂ ಪೊಸತಾಯ್ತು ಸಂಗರಂ ಮೆರೆಯೆ ಭೂಮಂಡಲದೊಳು ॥ ಆಶ್ಚರ್ಯವೆಂನೆ ಕಾದಿ ಖಳನಚ್ಯುತನ ಶರದಿ । ಮೂರ್ಛೆಗೊಂಡಿರೆ ದುಷ್ಟಸೈನಿಕವ ಶ್ರೀಕೃಷ್ಣ । ಕೊಚ್ಚಿ ಕೆಡಹುತ ಗೆಲ್ದು ಮೆರೆವನಿತರೊಳಗೆದ್ದು ಶ್ರೀಧರನೊಳಿದಿರಾದನು ॥ ೧ ॥

ರಾಗ ದೇಶಿ ಅಷ್ಟತಾಳ

ಮತ್ತೆ ಕೋಲ್ಗರೆದಸುರನ ಚಾಪವ । ಕತ್ತರಿಸುವನಿತರಲಿ ಪಲ್ಗಡಿ । ವುತ್ತ ಮೇಲ್ ಪಾಯ್ದಾಗಲೆ ॥ ೧ ॥ ಕುಂತ ಕೈಗೊಂಡು ಬರುತಿರೆ ಕಾಣುತ । ಕಂತು ಪಿತನದ ಸೆಳೆದುಕೊಳಲು ಕೃ । ತಾಂತನಂದದಿ ಗರ್ಜಿಸಿ ॥ ೨ ॥ ಮುಷ್ಟಿಯುದ್ಧಕೆ ನಡೆತರಲೀಕ್ಷಿಸಿ । ದುಷ್ಟ ಕೆಡೆಯೆನುತಚ್ಯುತನು ತೆಗೆ । ದಿಟ್ಟನತಿ ದಿವ್ಯಾಸ್ತ್ರವ ॥ ॥ ೩ ॥ ಆ ಮಹಾಸ್ತ್ರದೊಳಸುರನ ಕಾಯವು । ಭೂಮಿಗೊರಗಲು ಕಾಣುತಲೆ ಸುರ । ಸ್ತೋಮ ಸುಮಮಳೆಗರೆಯಲು ॥ ೪ ॥

ಭಾಮಿನಿ

ದಂತವಕ್ತ್ರನ ಮರಣದಲಿ ಸುರ । ಸಂತತಿಗಳಂಬರದಿ ನಲಿದೋ । ರಂತೆ ಪೂಮಳೆಗರೆಯೆ ಸಜ್ಜನನಿಕರ ನಲಿದಾಡೆ ॥ ಸಂತಸವು ಕೈಗೂಡಲತಿ ಕ । ಲ್ಪಾಂತ ಭೈರವನಂತೆ ಗಜರಿ ಮು । ರಾಂತಕನ ತಡೆದೆಂದನಾ ಶಿಶುಪಾಲನಡಹಾಯ್ದು ॥

ರಾಗ ಭೈರವಿ ಏಕತಾಳ

ಕಾದುವಡನುವಾಗೆಲವೊ । ಘಡ । ಯಾದವ ನಿಲು ನಿಲ್ಲೆಲವೊ ॥ ವೈದ ರ್ಭೆಯ ಕಳವಿನಲಿ । ಕ । ದ್ದೊಯ್ದಂದವನಿಂದಿನಲಿ ॥ ೧ ॥ ತೋರೆನ್ನುತ ಗರ್ಜಿಸುತ । ಮುರ । ವೈರಿಯ ಮುಸುಕಲು ನಗುತ ॥ ಭೂರಿ ಸರಳ್ಗಳ ತರಿದು । ದನು । ಜಾರಿಯು ನೋಡಿದ ಮುಳಿದು ॥ ೨ ॥ ಎಲೆ ಮೂಢಾತ್ಮನೆ ಕೇಳು । ತ । ನ್ನೊಳಗಿದಿರಾಂತವರುಗಳು ॥ ತಿಳಿದಿಹರೆನ್ನಯ ಪರಿಯ । ನರೆ । ಗಳಿಗೆಗೆ ತೋರ್ಪೆನು ನೆಲೆಯ ॥ ೩ ॥ ನೋಡೆನ್ನುತ ಮೂದಲಿಸಿ । ಹೊ । ಯ್ದಾಡಲು ಸುರತತಿವೆರಸಿ ॥ ನೋಡಲು ನೆರದಂಬರದಿ । ಕೊಂ । ಡಾಡಿದರುಂದನುವರದಿ ॥ ॥ ೪ ॥ ತುಂಬಿತು ತ್ರೈಭೂಮಿಯೊಳು । ಬಿಡ । ದುಂಬಿನ ಮಯವಾಗಿರಲು । ಅಂಬರತತಿಯುಲುಗಿದವು । ಸ । ಪ್ತಾಂಬುಧಿಯಲ್ಲಾಡಿದವು ॥ ೫ ॥

ಭಾಮಿನಿ

ಬಿಡಂತೊಡುವ ಸಮಸಂಧಿಸುವ ರೆಷೀ । ವಡೆದು ಹೂಡುವ ತೂಗಿಸುವ ಹಿಳಂ । ಕಿಡಂವ ಹರಿಸುವ ಬೆಸುವ ಬಿಡಿಸಂವದಸಮಚಾಪಲವ ॥ ನಂಡಿವ ಕವಿ ಯಿನ್ನಾರಂ ಹರಿ ಬಾಯ್ । ಬಡಿಕನೇ ಶಿಶುಪಾಲನೀ ಪರಿ । ನಡೆಸಂತಿರ್ದನಂ ಹರಿಯೊಡನೆ ಸಮಬೆಸನವಿಭ್ರಮವ ॥ ೧ ॥

ವಾರ್ಧಿಕ

ಪೊಡವಿಪತಿ ಕೇಳಿವರ ಸಮರಮಧ್ಯದೊಳವನಿ । ಗುಡಿದವತಿ ನಕ್ಷತ್ರವಾದಿತ್ಯ ಚಂದ್ರರಿಂ । ಗಡಹಾಯ್ದನಾ ರಾಹುಂ ಧೂಮಕೇತುಗಳೆದ್ದು ರಂಧಿರವಂಳೆ ಧರೆಗೆ ಸುರಿದು ॥ ಮಿಡುಕಿದವು ಪೃಥಿವೆಗಳು ಜಲಗಳುಕ್ಕಿದವವನಿ । ನಡಗಲಂತ್ಪಾತ ಕಂಗೊಳಿಸುತಿರೆ ಯಮಸೂನು । ಕಡುಭಯಂದಿ ನಾರದನ ಬೆಸಗೊಂಡಡವ ನಗಂತ ನುಡಿದನಾ ನೃಪತಿಲಕಗೆ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಬೆದರದಿರರಸ ಚೈದ್ಯಾದಿ ದಾನವರ ಸಂ । ಪದವನಂ ಕೆಡಿಸಲಾಗಿ ॥ ಒದಗಿ ತೆಂದೆನೆ ಯಂಮಸಂತ ಪರಿಹಾರವೆಂ । ತದಕೇಂದು ಬೆಸಗೊಳ್ಳಲಂ ॥ ೧ ॥ ಸರು ವಂತಯರ್ಾಮಿಂ ನಾಯಕ ನಿಮಗಾಪ್ತನಾ । ಗಿರುತಿರೆ ಮಂಂದಿದಕೆ ॥ ಪರಿಹಾರ ವಾತನೆ ಹೊರತು ಬೇರುಂಟೆ ಶ್ರೀ । ವರನ ಲೀಲೆಗಳಿನಿತಂ ॥ ೨ ॥ ಖಳರವೆ ಸಾನಕಿಂತಾದುದೊ ಬಲ್ಲರಾ । ರೆಲೆ ಭೂಪ ಕೇಳೆನ್ನುತ ॥ ತಿಳಂಹಿ ಸಂತಯೀಸ ಲಿತ್ತಲು ಸಮನಾಗಿಯೆ । ಹಳಚಿದರಿವರೀರ್ವರು ॥ ೩ ॥ ಇವ ಹಿರಣ್ಯಾಕ್ಷ ರಾವಣನಾಗಿ ಮೆಂಊರನೆ । ಭವದಾತನೀತನೆಂದು ॥ ದಿವಿಜರೀಕ್ಷಿಸುತಾಡಲಾಹವ ಮೆರೆದುದು । ವಿವಿಧಾಸ್ತ್ರಸಾರದಲಿ ॥ ೪ ॥

ಭಾಮಿನಿ

ಕಾದಿದರು ವಿವಿಧಾಸ್ತ್ರವಿದ್ಯಾ । ಭೇದದಲಿ ರಥಭಂಗಚಾಪ ವಿ । ನೋದ ದಲಿ ಶಸ್ತ್ರೌಘಸಂಹರಣಪ್ರಸಂಗದಲಿ ॥ ಮಾಧವನೆ ಮಿಗಿಲೆಂದು ಮುರಹರ । ಗಾದುದಪಜಯವೆಂದು ಸೈನ್ಯ ಮ । ಹೋದಧಿಯೊಳಿತ್ತಂಡ ಪೊಗಳಲು ಮೆರೆ ದುದಾ ಸಮರ ॥ ೧ ॥

ರಾಗ ದೇಶಿ ಮಟ್ಟೆತಾಳ

ಮರಳಿ ದೈತ್ಯನ । ಕರದ ಚಾಪವ । ತರಿದು ಬಿಸುಡಲೊಡನೆ ಮುಂದು । ವರಿದು ಗರ್ಜಿಸಿ ॥ ೧ ॥ ಯಾದವೇಂದ್ರನ । ಬೈದು ಕರದೊಳು । ಕೈದು ಗೊಂಡು ಕಾದಿ ರಣದಿ । ಮಂಊದಲಿಸಿದನಂ ॥ ೨ ॥ ವಿಕ್ರಮಾಗ್ನಿಯಂ । ವೇದ

ಮಂಯಂವಹ । ಚಕ್ರವನ್ನು ತೆಗೆಯಂಲತಿಶ । ಯರ್ಾಕ ಪ್ರಭೆಯೊಳು ॥ ೩ ॥ ಮೂರಂ ಲೋಕವು । ಗಾರುಗೆಡುತಿರೆ । ವಾರಿಜಾಕ್ಷ ಬೆಸಸಿ ಕಳುಹೆ । ಭೂರಿ ವೇಗದಿ ॥ ೪ ॥ ವರ ಸುದರ್ಶನ । ಬರುತ ಖೂಳನ । ಮೆರೆವ ಕಂಠದೆಡೆಯೊಳೌಕಿ । ಮುರಿದುದಾಕ್ಷಣ ॥ ೫ ॥ ತಲೆ ಸುರರ್ಗಳ । ಮೇಳದಿಂದಲಿ । ನಲಿದು ರಕ್ತಧಾರೆಯಿಂದ । ಲಿಳೆಗೆ ಬೀಳಲಂ ॥ ೬ ॥ ಒಡೆದು ಜ್ಯೋತಿಯು । ಸಿಡಿಯು ಲಭ್ರಕೆ । ಒಡನೆ ಚಕ್ರವಯ್ದಿ ನಿಜದೊ । ಳಡಗಿ ನಿಂದುದು ॥ ೭ ॥

ಭಾಮಿನಿ

ಆರು ಕೋಟಿ ರಥೌಘ ಮೂವ । ತ್ತಾರು ಕೋಟಿ ಗಜಂಗಳಿಪ್ಪ । ತ್ತಾರಂ ಕೋಟಿ ತುರಂಗವೆರಡಕ್ಷೋಹಿಣೀ ಸೇನೆ ॥ ಕೋರೆದಾಡೆಯಂ ಭಾರಿ ದೇಹದ । ವೀರ ದಾನವರಸುವ ನಿಮಿಷಕೆ । ಕಾರಿದನು ಕರುಣಾಳು ದೇವನು ಚಕ್ರ ದೃಷ್ಟಿಯಲಿ ॥ ೧ ॥

ರಾಗ ಭೈರವಿ ಝಂಪೆತಾಳ

ಇಂದ್ರಾದಿ ಸುರರಮರ । ದುಂದುಂಭಿಯು ವೊಳಗಿ ಸುಖ । ದಿಂದ ಪೂಮಳೆ ಗರೆದ । ರೊಂದಾಗಿ ನಲಿದಂ ॥ ೧ ॥ ನೆಗ್ಗಿದರು ನೆರೆದಖಿಳ । ಲಗ್ಗಿಗರು ಶಿಶಂ ಪಾಲ । ನಿರ್ಗಮಂದಿ ನೃಪಕಟಕ । ತಗ್ಗಿತಲ್ಲಲ್ಲಿ ॥ ೨ ॥ ಹೊದ್ದಿನಲಿ ಕಾದಿರ್ದ । ಹದ್ದಂ ನರಿ ವಾಯಂಸ ಸ । ಮೃದ್ಧಿಯಂಊಟದಿ ದಣಿದು । ದಾದ್ಯಂತವೆಲ್ಲ ॥ ೩ ॥ ಶಿಶುಪಾಲನಾತ್ಮಜರಂ । ಬಸವಳಿದಂ ಪದಕೆರಗೆ । ವಸುಧೆಯಭಿಷೇಕವವ । ರ್ಗೆಸಗಿ ಬೀಳ್ಕೊಡಲು ॥ ೪ ॥ ನೆರೆದು ಭೂಸುರರು ಮುನಿ । ವರರಂ ಕ್ರತಂ ಕುಂಡದೊಳ । ಗುರಿಯೆಸಗಂತೀ ಮಖವ । ಪರಿಪೂರ್ಣವೆಸಗೆ ॥ ೫ ॥

ಭಾಮಿನಿ

ಶ್ರುತಿವಿಧಾನದೊಳಖಿಳ ಪೂರ್ಣಾ । ಹುತಿಯು ಪಾರಾಯಣದ ನಿಗಮಂ । ಪ್ರತತಿಗಳ ಪರಿಪೂತ ಪರಿಮಳಮಯದಿಶಾವಳಿಯಂ ॥ ಕ್ರತುಸಮಾಪ್ತಿಯೊಳವ ಭೃಥದ ಭೂ । ಪತಿಯ ವಿಮಲಸ್ನಾನಪುಣ್ಯೋ । ಚಿತದಲೋಕುಳಿ ಯಾಡಿ ನಲಿದಂದು ಲೋಕ ಸುರನರರ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ರಾಜಾಧಿಪತಿ ಕೇಳು ರಾಜಸೂಯದೊಳು ಮು । ಹಾಜನರುಂಡುಂಡಂ ದಣಿದು ॥ ರಾಜದ್ರವ್ಯವ ಕೊಂಡು ದಣಿದ ಸಂಗತಿಯು ವಿ । ರಾಜಿಸಲರಿದೆನ ಗೆಂದ ॥ ೧ ॥ ಮತ್ತೆ ತಾಪಸರಿಗೊಂದಿಶಿ ನಿಮ್ಮ ಕೃಪೆಯಿಂದ । ಲಾಯ್ತೆಮಂ ಗಭ್ಬರಸಿದ್ಧಿ ॥ ಅತ್ಯಂತ ದಣಿದಿರೀವರೆಗೆ ನಿಮ್ಮಡಿಗಳ । ಸತ್ಕರಿಸಲು ಪಾತ್ರನಲ್ಲ

॥ ೨ ॥ ಇಂತೆನುತುಡುಗೊರೆಯಿಂದ ಮನ್ನಿಸಲತಿ । ಮಂತ್ರಾಶೀರ್ವಾದದಿ ಹರಸಿ ॥ ಸಂತೋಷದಿಂದ ಬೀಳ್ಗೊಂಡಂ ತಾಪಸರೆಲ್ಲ । ತಂತಮ್ಮಾಶ್ರಮಂಕೆ ಸಾರಿದರು ॥ ೩ ॥ ಭೂಪಾಲವರ್ಗವನುಚಿತೋಕ್ತಿಯಿಂದ ಮ । ಹೀಪತಿ ಮನ್ನಿಸಿ ಕಳುಹಿ ॥ ಶ್ರೀಪತಿಯುಂಳಿಯೆ ಮಿಕ್ಕವರನೆಲ್ಲರ ಕುಲ । ದೀಪ ಧರ್ಮಜ ಬೀಳಂಗೊಂಡ ॥ ೪ ॥ ಸುರರು ಪೂಮಳೆ ಮಂತ್ರಾರತಿಯಿಂದಚ್ಯುತನನು । ಸ್ಮರಿಸಲಂ ಧರೆಯ ನಾರಿಯರು ॥ ನೆರೆದು ಶ್ರೀಕೃಷ್ಣಪಾಂಡವರಿಗಾರತಿಯೆತ್ತಿ । ಪರಿಪರಿಯಿಂದ ಪಾಡಿದರಂ ॥ ೫ ॥

ರಾಗ ಧವಳಾರ ಏಕತಾಳ

ಮಿತ್ರೆಯರೆಲ್ಲರು ಕೂಡುತಲಿ । ಚಿತ್ತಜನಯ್ಯನ ಪಾಡುತಲಿ ॥ ಮುತ್ತಿನ ಹರಿವಾಣದೊಳಾರತಿಗಳ । ನೆತ್ತಿದರೈವರನು ಪೊಗಳುತಲಿ ॥ ಶೋಭಾನೆ ॥ ೧ ॥ ಶ್ರೀಮಧುಸೂದನ ಕೃಷ್ಣನಿಗೆ । ಸೋಮಕುಲಾಧಿಪ ಧರ್ಮಜಗೆ॥ ಭೀಮಾರ್ಜುನ ರತಿಬಲರಿಗೆ ನಕುಲಗೆ । ಕಾಮಿತಗುಣ ಸಹದೇವನಿಗೆ । ಶೋಭಾನೆ ॥ ೨ ॥ ಚಿನ್ಮಯರೂಪಗೆ ಮುರಹರಗೆ । ಸನ್ನುತವರದ ಕೃಪಾರ್ಣವಗೆ ॥ ಮನ್ಮಥಪಿತಗೆ ಜಗನ್ಮಯರೂಪ ಸು । ಪರ್ಣಾರೂಢಗೆ ಗಿರಿಧರಗೆ ॥ ಶೋಭಾನೆ ॥ ೩ ॥ ವೃಂದಾರಕಮುನಿವಂದಿತಗೆ । ಇಂದ್ರಾದಿಗಳರ್ಚಿಪ ಸಿರಿಗೆ ॥ ಚಂದದೊಳೆಮ್ಮಯ ಮನೆಯೊಳಂ ಮೆರೆವಾ । ನಂದಗೆ ಶ್ರೀನರಸಿಂಹನಿಗೆ ॥ ಶೋಭಾನೆ ॥ ೪ ॥

ಭಾಮಿನಿ

ಮತ್ತೆ ನಯನೀತಿಗಳ ಮಾರ್ಗವ । ವಿಸ್ತರಿಸಿ ಪಾಂಡವರುಗಳ ಪುರಂ । ಷೋತ್ತಮನಂ ಬೀಳ್ಗೊಂಡು ಬಂದನಂ ದ್ವಾರಕಾಪುರಿಗೆ ॥ ಅತ್ತಲಧಿಕಂತ್ಸವದೊಳಿಂದ್ರ । ಪ್ರಸ್ಥದೊಳು ಪಾಂಡವರಂ ಮೆರೆದ ಪ । ವಿತ್ರಚರಿತೆಯನೊರೆದೆ ನರಸಿಂಹನ ಕಟಾಕ್ಷದಲಿ ॥ ೧ ॥

ವಾರ್ಧಿಕ

ರಾಜಸೂಯಾಧ್ವರವ ಜನಮೇಜಯಂಗೆ ಮುನಿ । ರಾಜ ವೈಶಂಪಾಯಂ ನೊರೆದ ಚರಿತವ ನೀ ಮ । ಹಾಜನದೊಳರಿವಂತೆ ವರ್ಣಿಸಿದೆನಿದರೊಳಗನಂತ ದೋಷಗಳಿರ್ದಡೆ ॥ ಮಾಜದದ ಪರಿಹರಿಸಿ ಸಾಮ್ರಾಜ್ಯಮೈಶ್ವರ್ಯ । ತೇಜ ಮಿಷ್ಟಾರ್ಥಗಳನಿತ್ತು ಸಲಹೆಮ್ಮವನು । ಮೂಜಗನ್ಮಾತೆ ಶಿರವಟಿವಾಸೆ ರವಿಭಾಸೆ ದುರ್ಗಾಂಬೆ ಸಲಹೆಂಬೆನು ॥ ೧ ॥

ಮಂಗಲ

ರಾಗ ತಿಲ್ಲಾನಿ ಅಷ್ಟತಾಳ

ಮಂಗಲ ಶ್ರೀನರಸಿಂಹನಿಗೆ । ಜಯ । ಮಂಗಲ ಭಕ್ತರ ಭಾಗ್ಯಪಯೋ

ನಿನಿಗೆ ॥ ಮಂಗಲಂ ॥ ಪ ॥ ವೇದರಕ್ಷಗೆ ಕೂರ್ಮನಾದಗೆ ಧರಣಿಯ । ಕಾಯ್ದಗೆ ಶ್ರೀನರಸಿಂಹರೂಪನಿಗೆ ॥ ಮೇದಿನಿಯಳೆದಗೆ ಭಾರ್ಗವರಾಮಗೆ । ಯಾದವಕೃಷ್ಣಗೆ ಬೌದ್ಧಕಲ್ಕ್ಯನಿಗೆ ॥ ಮಂಗಲಂ ॥ ೧ ॥ ತರಳನ ಮೊರೆ ಕೇಳಿ ಕಂಬವನೊಡೆದುಗ್ರ । ನರಸಿಂಹರೂಪವ ತಾಳಿ ಬಂದು ॥ ದುರುಳನ ಬಗಿದತಿ ಕರುಳಮಾಲೆಯ ತಾನು । ಧರಿಸಿ ಮೂಲೋಕವ ಪೊರೆದವಗೆ ॥ ಮಂಗಲಂ ॥ ॥ ೨ ॥ ಕಮಲಜನಯ್ಯಗೆ ಕಮಲದಳಾಕ್ಷಗೆ । ಕಮಲನಿಕೇತನೆಯರಸನಿಗೆ ॥ ಕಮಲಾಪ್ತಕೋಟಿಸಂಕಾಶಗೆವಿಮ್ಮಿಷ್ಟವೀ । ವಮಿಂತ ದೇವರ ದೇವ ನರಸಿಂಹಗೆ ॥ ಮಂಗಲಂ ॥ ೩ ॥

ಯಕ್ಷಗಾನ ರಾಜಸೂಯಾಧ್ವರ ಮುಗಿದುದು

ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು, ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಿಸಲ್ಪಟ್ಟಿತು

S. ೯೫/O. 1004/ R. 1150 1000—12-1972

ಕನ್ನಡ ಯಕ್ಷಗಾನ ಪ್ರಸಂಗಗಳು

ಅತಿಕಾಯಕಾಳಗ	...	...	0.60
ವೀರಮಣಿಕಾಳಗ	...	...	0.65
ಕಾಲನೇಮಿಕಾಳಗ	...	...	0.60
ದೇವಯಾನಿಕಲ್ಯಾಣ	...	...	0.75
ಅನಂತವ್ರತಮಹಾತ್ಮೆ	...	...	0.30
ಕೃಷ್ಣಸಂಧಾನ, ಭೀಷ್ಮಪರ್ವ ಸಹಿತ	...	...	0.70
ದ್ರೌಪದೀಪ್ರತಾಪ	...	...	0.75
ಸುಧನ್ವಕಾಳಗ	...	...	0.75
ಗಿರಿಜಾಕಲ್ಯಾಣ	...	...	0.65
ಪ್ರಹ್ಲಾದಚರಿತ್ರೆ	...	...	0.50
ಯಾದವಾಭ್ಯುದಯ	...	...	0.45
ರೇವತೀಕಲ್ಯಾಣ	...	...	0.75
ರುಗ್ಮವತೀಕಲ್ಯಾಣ	...	...	0.75
ಜಾಂಬವತೀಕಲ್ಯಾಣ, ಸತ್ಯಭಾಮಾಪರಿಣಯ	...	...	0.50
ಪಾರಿಜಾತಪ್ರಸಂಗ	...	...	0.75
ರತಿಕಲ್ಯಾಣ	...	...	0.50
ಚಂದ್ರಹಾಸಚರಿತ್ರೆ	...	...	0.75
ಮೇಧಾವಿಕಾಳಗ (ಶಶಿಪ್ರಭಾಪರಿಣಯ)	...	...	0.70
ಕುಮುದ್ವತೀಕಲ್ಯಾಣ	...	...	0.60
ಮೀನಾಕ್ಷಿಕಲ್ಯಾಣ	...	...	0.65
ಅಂಧಕಾಸುರಕಾಳಗ	...	...	0.25
ಹರಿಶ್ಚಂದ್ರಚರಿತ್ರೆ	...	...	0.60
ಪಲಾಂಡುಚರಿತ್ರೆ	...	...	0.25
ಜಲಂಧರನ ಕಾಳಗ	...	...	0.75
ಬೈದ್ಯರ್ಕಳ ಪ್ರತಾಪ	...	...	0.65
ರತ್ನಾವತೀಕಲ್ಯಾಣ (ದೃಢವರ್ಮಕಾಳಗ)	...	...	0.75

ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ ಉಡುಪಿ